● ಸಂಪುಟ 6
● ಸಂಚಿಕೆ 5
ಮೇ 2010

# ಸ್ವಾಭಿಮಾನಿ ಸಹಕಾರಿ

ಕರ್ನಾಟಕ ರಾಜ್ಯ
ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ರೂ. 5

ವಾರ್ಷಿಕ ಚಂದಾ ರೂ 50/-

ಅಧ್ಯಕ್ಷರ ನುಡಿ.......................



## ಸಹಕಾರಿಗಳ ಪ್ರಗತಿಯಲ್ಲಿ ಮಾನವ ಸಂಪನ್ಮೂಲಗಳ ಸದ್ಬಳಕೆ (proper utilization) ಮೌಲೀಕರಣ (Evaluation) ಮತ್ತು ಅಧೀಪ್ರೇರಣೆ (Motivation)

ಪ್ರತಿಯೊಂದು ವಸ್ತುವಿನ ಉತ್ಪಾದನೆಯಲ್ಲಿ ಭೂಮಿ, ಹಣ ಸಂಘಟನೆಗಳಿಗಿಂತ ಹೆಚ್ಚಿನ ಮಹತ್ವ ಮಾನವ ಸಂಪನ್ಮೂಲಕ್ಕೆ ಇದೆ ಎಂಬುದನ್ನು ಎಲ್ಲರೂ ಒಪ್ಪಲೇಬೇಕಾದ ವಿಷಯ. ಮಾನವ ಸಂಪನ್ಮೂಲ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಿದ್ದರೆ ಯಾವ ಸಂಘಟನೆಯೂ ಪ್ರಗತಿಹೊಂದಲು ಸಾಧ್ಯವಿಲ್ಲ. ಈ ಬಗ್ಗೆ ಅನೇಕ ಉದಾಹರಣೆಗಳನ್ನು ತಾವು ಕಂಡಿರಬಹುದು. ಪ್ರತಿಯೊಂದು ವ್ಯವಸ್ಥೆಯಲ್ಲಿ ಸಂಘಟನೆಯಲ್ಲಿ ಮಾನವ ಶಕ್ತಿಯ ಸದುಪಯೋಗ ಹಾಗೂ ಕಾರ್ಯ ನಿರ್ವಹಣೆಯ ಮೌಲೀಕರಣ ಹಾಗೂ ಅಧೀಪ್ರೇರಣೆಗಳೆ ಸಾಧನೆಯ ತಳಹದಿಯಾಗುವುದರಿಂದ ಸೌಹಾರ್ದ ಸಹಕಾರಿಗಳು ಹೆಚ್ಚು ಗಮನ ಹರಿಸುವುದು ಅಪೇಕ್ಷಣೀಯ.

ಈ ಹಿಂದೆ ನಮ್ಮ ದೇಶದ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳನ್ನು ಅಧ್ಯಯನ ಮಾಡಲು ಬರುತ್ತಿದ್ದ ವಿದೇಶಿಯರು ಭಾರತವನ್ನು ಕುರಿತು "ಭಾರತ ಸ್ವಾಭಾವಿಕ ಸಂಪನ್ಮೂಲಗಳ ಸಂಪದ್ಭರಿತ ದೇಶ ಆದರೆ ಭಾರತದ ಜನ ಬಡವರು" ಎಂದು ಹೇಳಿದ್ದರಂತೆ. ನಮ್ಮ ದೇಶದಲ್ಲಿ ಸಾಕಷ್ಟು ಜನಸಂಖ್ಯೆಯಿದ್ದು ದುಡಿಯುವ ಕೈಗಳಿದ್ದು ಆ ಕೈಗಳಿಗೆ ಸಮರ್ಪಕ ಕೆಲಸವನ್ನು ಕೊಡಲು ಸಾಧ್ಯವಾಗದೆ, ವಹಿಸಿದ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಲಾಗದೆ, ನಮ್ಮಲ್ಲಿರುವ ದುಡಿಯುವ ಶಕ್ತಿಯನ್ನು ಸರಿಯಾಗಿ ಉಪಯೋಗಿಸದೆ ಇರುವುದು ಇದಕ್ಕೆ ಕಾರಣವೆನ್ನಬಹುದು. ದೇಶದ ಈ ಸಮಸ್ಯೆ ನಿವಾರಣೆಯಲ್ಲಿ ಸಹಕಾರಿ ಕ್ಷೇತ್ರಕ್ಕೂ ಗುರುತರ ಜವಾಬ್ದಾರಿಯಿದೆ. ಸಹಕಾರಿಗಳಲ್ಲಿ ಕಾರ್ಯನಿರ್ವಹಿಸುವ ಮಾನವ ಸಂಪನ್ಮೂಲಗಳ ಮೌಲೀಕರಣ ಹಾಗೂ ಸದ್ಬಳಕೆಯ ಬಗ್ಗೆ ಸೌಹಾರ್ದ ಸಹಕಾರಿಗಳು ಹೆಚ್ಚು ಗಮನ ನೀಡಬೇಕಾಗುತ್ತದೆ.

(2ನೇ ಪುಟಕ್ಕೆ)

## ಪ್ರಾರಂಭವಾಯಿತು "ಇ" ಸ್ಟಾಂಪಿಂಗ್ ವ್ಯವಹಾರ

ಏಪ್ರಿಲ್ 2010 ರಿಂದ ರಾಜ್ಯದ 57 ಸೌಹಾರ್ದ ಸಹಕಾರಿಗಳಲ್ಲಿ ಇ ಸ್ಟಾಂಪಿಂಗ್ ವ್ಯವಹಾರ ಪ್ರಾರಂಭವಾಗಿದೆ. ಸಾರ್ವಜನಿಕರಿಂದ ಈ ವ್ಯವಹಾರಕ್ಕೆ ಉತ್ತಮ ಪ್ರತಿಕ್ರೀಯೆ ದೊರಕುತ್ತಿದೆ. ಈ ತಿಂಗಳ ಅಂತ್ಯದೊಳಗೆ ಹಂತ ಹಂತವಾಗಿ ಒಟ್ಟಾರೆ 100 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಈ ವ್ಯವಹಾರವನ್ನು ಪ್ರಾರಂಭಿಸಲು ಸಿದ್ಧರಾಗಿದ್ದು ಸ್ಟಾಕ ಹೊಲ್ಡಿಂಗ್ ಕಾರ್ಪೊರೇಶನ್ ಆಫ್ ಇಂಡಿಯಾದವರು ಯುಸರ್ ಐ.ಡಿ. ಸೂಪರವೈಸರ್ ಐ.ಡಿ. ಸಂಖ್ಯೆಗಳನ್ನು ನೀಡಿದ ನಂತರ ಈ ವ್ಯವಹಾರಕ್ಕೆ ಚಾಲನೆ ಸಿಗುತ್ತದೆ.



ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ಹೊಸಪೇಟೆಯ ಹುಬ್ಬಳ್ಳಿ ಶಾಖೆಯಲ್ಲಿ ಉದ್ಘಾಟನೆ



ಕೊಪ್ಪದ ಗಾಯತ್ರಿ ಸೌಹಾರ್ದ ಸಹಕಾರಿಯ ಶಾಖೆಯಲ್ಲಿ ಉದ್ಘಾಟನೆ

**ಸೌಹಾರ್ದ ಸಹಕಾರಿಗಳ ಸಂಖ್ಯೆ 1352**

**ಅಧ್ಯಕ್ಷರ ನುಡಿ ಮುಖಪುಟದಿಂದ...**

ಸಹಕಾರಿ ಸಂಸ್ಥೆಗಳಲ್ಲಿ ಮಾನವ ಸಂಪನ್ಮೂಲ ಎಂದರೆ ಸಹಕಾರಿಯ ಮಾಲಿಕರು ಎನ್ನಿಸುವ ಸದಸ್ಯರು, ನೀತಿ ನಿಯಮಗಳನ್ನು ರಚಿಸುವ ಆಡಳಿತಮಂಡಳಿ ದೈನಂದಿನ ಕಾರ್ಯನಿರ್ವಹಿಸುವ ಸಿಬ್ಬಂದಿ. ಈ ಎಲ್ಲ ವರ್ಗದವರೂ ಸಹ ಅವರವರು ನಿರ್ವಹಿಸುವ ಕಾರ್ಯ ಸಮರ್ಪಕವಾಗಿದ್ದರೆ ಮಾತ್ರ ಸಹಕಾರಿಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಹೇಳಬಹುದು. ಆದರೆ ಸಂಘ ಉತ್ತಮ ಪ್ರಗತಿಯನ್ನು ಸಾಧಿಸಿದಾಗ ಆಡಳಿತ ಮಂಡಳಿಯು ತಮ್ಮಿಂದಲೆ ಈ ಪ್ರಗತಿ ಸಾಧ್ಯವಾಗಿದೆ ಎಂದು ಹೇಳುತ್ತ ಸಿಬ್ಬಂದಿಯ ಶ್ರಮಕ್ಕೆ ತಕ್ಕ ಪ್ರತಿಫಲ ಅಥವಾ ಮಹತ್ವ ಕೊಡದಿದ್ದರೆ ಒಂದು ರೀತಿಯ ಶೋಷಣೆ ಮಾಡಿದಂತಾಗುತ್ತದೆ ಸಿಬ್ಬಂದಿಯವರಲ್ಲಿ ಉತ್ಸಾಹ ಕಡಮೆಯಾಗುತ್ತದೆ. ಪ್ರಗತಿಗೆ ಹಿನ್ನಡೆಯಾಗುತ್ತದೆ.

ಪ್ರತಿವರ್ಷ ಸಹಕಾರಿಗಳ ಲೆಕ್ಕ ಪರಿಶೋಧನೆಯಾದಂತೆ ಸಿಬ್ಬಂದಿಯವರ ಕಾರ್ಯನಿರ್ವಹಣೆಯ ಬಗ್ಗೆ ಮೌಲೀಕರಣ ಮಾಡುವ ಉತ್ತಮ ವ್ಯವಸ್ಥೆಯನ್ನು ನಮ್ಮ ಸಹಕಾರಿಗಳು ರೂಢಿಸಿಕೊಳ್ಳಬೇಕಾಗಿದೆ. ಸಾಮಾನ್ಯವಾಗಿ ಸಿಬ್ಬಂದಿಯನ್ನು ಕೆಲಸಕ್ಕೆ ನೇಮಿಸುವಾಗ ಸಿಬ್ಬಂದಿಯ ವಿದ್ಯಾರ್ಹತೆಗಾಗಲಿ ಅನುಭವಕ್ಕಾಗಲಿ ಹೆಚ್ಚು ಮಹತ್ವ ನೀಡದೆ ನೇಮಕ ಮಾಡಿಕೊಂಡ ಉದಾಹರಣೆಗಳು ಸಾಕಷ್ಟು ಇವೆ. ಇದರ ಪರಿಣಾಮವಾಗಿಯೆ ಸಹಕಾರಿ ಕ್ಷೇತ್ರದಲ್ಲಿ ಶಿಸ್ತು, ದಕ್ಷತೆ, ಕ್ರೀಯಾಶೀಲತೆಗಳು ಕಡಿಮೆಯಾಗಿ ನೀರೀಕ್ಷಿಸಿದ ಪ್ರಗತಿಗೆ ಹಿನ್ನಡೆಯಾಗಿರುವುದನ್ನು ಗಮನಿಸಬಹುದಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಸಹಕಾರಿಗಳಲ್ಲಿ ನೇಮಕ ಪ್ರಕ್ರಿಯೆಗಳಲ್ಲಿ ವಿದ್ಯಾರ್ಹತೆಗಳಿಗೆ ಹಾಗೂ ಅನುಭಕ್ಕೆ ಹೆಚ್ಚಿನ ಗಮನ ನೀಡಲಾಗುತ್ತಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಈ ಸಿಬ್ಬಂದಿಗೆ ಹೆಚ್ಚಿನ ತರಬೇತಿ ನೀಡುವುದರ ಜೊತೆಗೆ ಅವರು ನಿರ್ವಹಿಸುವ ಕಾರ್ಯಗಳಲ್ಲಿ ಹೆಚ್ಚಿನ ಗಮನ ಹರಿಸುವ ಹಾಗೆ ಅಧಿಪ್ರೇರಣೆಯ (Motivation) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅವಶ್ಯಕ. ನಿಗದಿತ ಅವಧಿಯಲ್ಲಿ ಪ್ರತಿಯೊಬ್ಬ ಸಿಬ್ಬಂದಿ ನಿರ್ವಹಿಸುವ ಕೆಲಸದ ಮೌಲೀಕರಣ (Evaluation) ಮಾಡಿದಾಗ ಮಾತ್ರ ಅವರಿಂದ ಹೆಚ್ಚಿನ ಕೆಲಸ ತೆಗೆಯುವುದು ಸಾಧ್ಯವಾಗುತ್ತದೆ. ನೌಕರರ ಆಲೋಚನಾ ಶೈಲಿಯಲ್ಲಿ ಬದಲಾವಣೆ, ಕಾರ್ಯವೈಖರಿಯಲ್ಲಿ ಸುಧಾರಣೆ, ಸಮಯದ ಸದುಪಯೋಗ ಮಾಡುವ ಪ್ರವೃತ್ತಿ, ವ್ಯಕ್ತಿತ್ವದಲ್ಲಿ ವಿಕಸನವಾದಾಗ ಮಾತ್ರ ಸಹಕಾರಿಯ ಅಭಿವೃದ್ಧಿ ಸಾಧ್ಯ. ತನ್ನ ಸಾಮರ್ಥ್ಯವೇನು? ತನ್ನಿಂದ ಸಹಕಾರಿ ಏನನ್ನು ಅಪೇಕ್ಷಿಸುತ್ತದೆ, ತಾನು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆಯೇ ಎಂಬ ಬಗ್ಗೆ ಅರಿವು ಎಲ್ಲ ಸಿಬ್ಬಂದಿಗೆ ಇರಬೇಕು.

ಒಬ್ಬ ಸಿಬ್ಬಂದಿಗೆ ನೀಡಿರುವ ಗುರಿ ಅವನ ಸಾಧನೆ, ಸಾಧನೆಯಲ್ಲಿ ಶೇಕಡಾವಾರು ಕೊರತೆ ಅವನ ಸಾಮರ್ಥ್ಯವೇನು? ಅವನು ಕಾರ್ಯನಿರ್ವಹಿಸುವ ಪರಿಸರ, ಅವನಿಗಿರುವ ಸೌಲಭ್ಯಗಳು ಸೌಕರ್ಯಗಳು ಆಡಳಿತ ಮಂಡಳಿಯ ಪ್ರೋತ್ಸಾಹ, ಸಹಕಾರ, ಹಿರಿಯರ ಮಾರ್ಗದರ್ಶನ, ಸಹಕಾರ ಸಹಕಾರಿಯಿಂದ ಅಥವಾ ಮೇಲಾಧಿಕಾರಿಗಳಿಂದ ಅವನ ನಿರೀಕ್ಷೆ ಅವನು ಸಹಕಾರಿಯಲ್ಲಿ ಆಸ್ತಿಯೆ ಅಥವಾ ಜವಾಬ್ದಾರಿಯೆ ಇವೆಲ್ಲವುಗಳ ಅರಿವು ಮೂಡಿಸುವಂತಹ ಮೌಲೀಕರಣ ಕಾರ್ಯ ಎಲ್ಲ ಸಹಕಾರಿಗಳಲ್ಲಿ ಆಗಬೇಕು. ಮೌಲೀಕರಣಕ್ಕೆ ಪೂರಕವಾಗಿ ಅಧಿಪ್ರೇರಣೆಯ ಕಾರ್ಯವನ್ನು ನಿರ್ವಹಿಸಿದಾಗ ಸಿಬ್ಬಂದಿಯಲ್ಲಿ ಕ್ರೀಯಾಶೀಲತೆ, ದಕ್ಷತೆ, ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ಹಾಗೂ ಕಾರ್ಯನಿರ್ವಹಿಸುವಿಕೆ ಪ್ರಮಾಣದಲ್ಲಿ ಹೆಚ್ಚಳವನ್ನು ನಿರೀಕ್ಷಿಸಬಹುದಾಗಿದೆ. ಸರಕಾರ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದಲ್ಲಿರುವಂತೆ ಸಹಕಾರಿ ಕ್ಷೇತ್ರದಲ್ಲಿಯೂ ಸಹ ಈ ಆಯಾಮವನ್ನು ಸೌಹಾರ್ದ ಸಹಕಾರಿಗಳು ರೂಢಿಸಿಕೊಳ್ಳಬೇಕು. ಮತ್ತು ಇದೊಂದು ನಿರಂತರ ಪ್ರಕ್ರಿಯೆಯಾದಲ್ಲಿ ಸೌಹಾರ್ದ ಸಹಕಾರಿಗಳ ಆರೋಗ್ಯಕರ ಬೆಳವಣಿಗೆಗೆ ಅಡಿಪಾಯವಾಗುವುದರಲ್ಲಿ ಎರಡು ಮಾತಿಲ್ಲ.

**-ಎಸ್.ಆರ್. ಸತೀಶಚಂದ್ರ**





## ಉಡುಪಿಯ ಜನರಲ್ ಇನ್ಸುರೆನ್ಸ್ ಎಂಪ್ಲಾಯೀಸ್ ಕೋ-ಆಪರೇಟಿವ್ ಸೊಸೈಟಿಗೆ ನೂತನ ಕಟ್ಟಡ

ಭಾರತದ ನಾಲ್ಕು ಪ್ರಮುಖ ಸಾಮಾನ್ಯ ವಿಮಾ ಸಂಸ್ಥೆಗಳಾದ ಓರಿಯೆಂಟಲ್ ಇನ್ಸುರೆನ್ಸ್, ಯುನೈಟೆಡ್ ಇನ್ಸುರೆನ್ಸ್, ನ್ಯಾಶನಲ್ ಇನ್ಸುರೆನ್ಸ್ ಹಾಗೂ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿಗಳ ನೌಕರರು ಸೇರಿ ಕಟ್ಟಿಕೊಂಡ ಜನರಲ್ ಇನ್ಸುರೆನ್ಸ್ ಎಂಪ್ಲಾಯೀಸ್ ಕೋ-ಆಪರೇಟಿವ್ ಸೊಸೈಟಿ ಇದೀಗ ತನ್ನದೆ ಆದ ನೂತನ ಕಟ್ಟಡವನ್ನು ಹೊಂದಿದೆ. ಕಟ್ಟಡದ ಉದ್ಘಾಟನೆಯನ್ನು ಶ್ರೀ ಪೇಜಾವರ ಶ್ರೀಗಳವರು ನೆರವೇರಿಸಿದರು. ಸಮಾರಂಭದಲ್ಲಿ ಶ್ರೀ ಸದಾನಂದಗೌಡರವರು, ಜಿಲ್ಲಾ ಯೂನಿಯನ್ ಅಧ್ಯಕ್ಷ ಶ್ರೀ ಕಿಶನ್ ಹೆಗಡೆ, ಸಂಘದ ಅಧ್ಯಕ್ಷ ಶ್ರೀ ಎಮ್. ಗೋಪಿಕೃಷ್ಣರಾವ್ ಮುಂತಾದವರು ಉಪಸ್ಥಿತರಿದ್ದರು. ಸಂಜೆ ನಡೆದ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ, ಲೆಕ್ಕಪರಿಶೋಧನಾ ನಿರ್ದೇಶಕ ಶ್ರೀ ಕೆ.ನಾರಾಯಣಸ್ವಾಮಿ, ಜಂಟಿನಿಬಂಧಕ ಶ್ರೀ ಹೆಚ್.ಎಸ್.ನಾಗರಾಜಯ್ಯ, ಶ್ರೀ ಎಮ್.ಗೋಪಿಕೃಷ್ಣರಾವ್‌ರವರು ಉಪಸ್ಥಿತರಿದ್ದರು.



## ವಿಜಾಪೂರದಲ್ಲಿ ಅಧಿಪ್ರೇರಣೆ ಹಾಗೂ ಕಾರ್ಯದಕ್ಷತೆ ಅಭಿವೃದ್ಧಿ ಶಿಬಿರ

ಇಲ್ಲಿನ ಸಿದ್ಧಸಿರಿ ಸೌಹಾರ್ದ ಪತ್ತಿನ ಸಹಕಾರಿಯ ಆಶ್ರಯದಲ್ಲಿ ರಾಜ್ಯದ ಕ್ರೆಡಿಟ್ ಸಹಕಾರಿ ಸಂಘಗಳ ಅಸೋಸಿಯೇಶನ್ ಹಾಗೂ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ವಿಜಾಪೂರ ಜಿಲ್ಲೆಯ ಎಲ್ಲ ಕ್ರೆಡಿಟ್ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಬರುವಂತೆ ಪ್ರೇರೇಪಿಸುವ ತರಬೇತಿ ಶಿಬಿರವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶಚಂದ್ರ ರವರು ಉದ್ಘಾಟಿಸಿದರು. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ 2001 ರಲ್ಲಿ ಪ್ರಾರಂಭವಾಗಿರುವ ಈ ಚಳವಳಿಯಲ್ಲಿ 1350 ವಿವಿಧ ರೀತಿಯ ಸಹಕಾರಿಗಳು ಉತ್ತಮರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಸದ್ಯದಲ್ಲಿಯೆ ದಶಮಾನೋತ್ಸವವನ್ನು ಆಚರಿಸಲು ಸಿದ್ಧರಾಗುತ್ತಿದ್ದೇವೆ. ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆಯನ್ನು ಕನಿಷ್ಠ 2000 ಕ್ಕೆ ಕೊಂಡೊಯ್ಯುವ ಪ್ರಯತ್ನದ ಅಂಗವಾಗಿ ಈ ಅಧಿಪ್ರೇರೇಪಣೆ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದ್ದೆಂದು ತಿಳಿಸಿದರಲ್ಲದೆ ಸಿದ್ಧಸಿರಿ ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಜಾಪೂರ ಜಿಲ್ಲಾ ಪ್ರತಿನಿಧಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ವಿಠ್ಠಲಗೌಡ ಬಿರಾದಾರರವರು ಮಾತನಾಡಿ ಸಹಕಾರಿ ಕ್ಷೇತ್ರದ ಮೂಲಕ ಅಸಾಧ್ಯವಾದುದನ್ನು ಸಾಧಿಸಬಹುದಾಗಿದೆ ಇದಕ್ಕೆ ಸಿದ್ಧಸಿರಿ ಸಹಕಾರಿಯೆ ಸಾಕ್ಷಿ ಎಂದು ಹೇಳಿದರು. ಶ್ರೀ ಸಾಗರ ಚವಜರವರು ಮಾತನಾಡಿದರು. ಸಿದ್ಧಸಿರಿ ಸೌಹಾರ್ದ ಪತ್ತಿನ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಂಕರಗೌಡ ಪಾಟೀಲ್ ಮಾತನಾಡಿ ಒಂದು ಸಹಕಾರಿ ಸಂಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸುವುದಕ್ಕೆ ಆ ಸಂಸ್ಥೆಯ ಸದಸ್ಯರು, ಗ್ರಾಹಕರು, ಹಾಗೂ ಹಿತೈಸಿಗಳು ನೀಡುತಿರುವ ಬೆಂಬಲ ಮಾರ್ಗದರ್ಶನ ಮತ್ತು ಆ ಸಂಸ್ಥೆಯ ಆಡಳಿತ ಮಂಡಳಿಯು ಹಾಕಿಕೊಳ್ಳುತ್ತಿರುವ ಅಭಿವೃದ್ಧಿಪರ ಕಾರ್ಯಕ್ರಮಗಳು ಅಧಿಕಾರಿಗಳ ಶ್ರಮ ಇವೆಲ್ಲವುಗಳು ಗಣನೆಗೆ ಬರುತ್ತವೆ. ನಮ್ಮ ಸಂಸ್ಥೆ ಕೇವಲ ಹೆಗ್ಗಳಿಕೆಗೆ ಮಾತ್ರ 82 ಶಾಖೆಗಳನ್ನು ತೆರೆದಿಲ್ಲ, ಸದಸ್ಯರ ಹಾಗೂ ಗ್ರಾಹಕರ ವಿಶೇಷವಾಗಿ ರೈತಸಮುದಾಯದ ಹಿತಾಸಕ್ತಿಯನ್ನು ಗಮನಿಸಿ ಕಾರ್ಯನಿರ್ವಹಿಸುತ್ತಿದ್ದೇವೆ ಎಂದು ತಿಳಿಸಿದರು.



ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶ್ರೀ ಶಂಕರಗೌಡ ಪಾಟೀಲರಿಂದ ಸಂಯುಕ್ತ ಸಹಕಾರಿ ಅಧ್ಯಕ್ಷರಿಗೆ ಸನ್ಮಾನ

# ಸಹಕಾರಿ ಸಂಸ್ಥೆಗಳಲ್ಲಿ ಬಡ್ಜೆಟ್




## ಶ್ರೀ ಮನೋಹರ ಮಸ್ಕಿ

**ವಿಧಾನ ಪರಿಷತ ಸದಸ್ಯರು, ಸಂಸ್ಥಾಪಕ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಹಾಗೂ ಅಧ್ಯಕ್ಷರು ಸುಕೋ ಬ್ಯಾಂಕ ಸಿಂಧನೂರು**


## ಸಂದರ್ಶನ

ಶ್ರೀಯುತ ಮನೋಹರ ಮಸ್ಕಿಯವರು ವಿಧಾನ ಪರಿಷತ ಸದಸ್ಯರು,ಸಂಸ್ಥಾಪಕ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಹಾಗೂ ಅಧ್ಯಕ್ಷರು ಸುಕೋ ಬ್ಯಾಂಕ ಸಿಂಧನೂರು ಇವರು ಕ್ರಿಯಾಶೀಲ ಸಹಕಾರಿ ನೇತಾರರು. ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ನಿರಂತರ ಚಿಂತನೆ ಮಾಡುವ ಶ್ರೀಯುತರು ಸಹಕಾರ ಸಂಘಗಳ ವಾರ್ಷಿಕ ಸಭೆಯಲ್ಲಿ ಮಂಡಿಸುವ ಆಯ-ವ್ಯಯ ಕೇವಲ ಸಾಂಪ್ರದಾಯಿಕ ಮಂಡನೆಯಾಗಬಾರದು ಅದು ವೈಜ್ಞಾನಿಕವಾಗಬೇಕು ಒಂದು ಅರ್ಥದಲ್ಲಿ ಆಯ-ವ್ಯಯವು ಸಂಘದ ಅಭಿವೃದ್ಧಿಯ ಕೈಗನ್ನಡಿಯಾಗಬೇಕು ಎಂದು ಅಭಿಪ್ರಾಯವುಳ್ಳವರು. ಬಡ್ಜೆಟ್ ಸಿದ್ಧಪಡಿಸುವುದು ಒಂದು ಕಲೆ ಎಂಬ ಅಭಿಪ್ರಾಯವುಳ್ಳವರು. ಶ್ರೀಯುತರ ಜೊತೆಗೆ ಸಹಕಾರಿಗಳಲ್ಲಿ ಆಯ-ವ್ಯಯದ ಕುರಿತು ನಡೆಸಿದ ಸಂದರ್ಶನವನ್ನು ಸಹಕಾರಿಗಳ ಅನುಕೂಲಕ್ಕಾಗಿ ಪ್ರಕಟಿಸಿದೆ.

ಸರ್. ನಮಸ್ಕಾರ –ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಸ್ವಾಭಿಮಾನಿ ಸಹಕಾರಿ ಪತ್ರಿಕೆ ಬಳಗದ ಪರವಾಗಿ ತಮಗೆ ಈ ಸಂದರ್ಶನಕ್ಕೆ ಆದರದ ಸ್ವಾಗತ ಕೋರುತ್ತೇನೆ.

ಉತ್ತರ: ನಮಸ್ಕಾರ ನಮಸ್ಕಾರ

ಪ್ರಶ್ನೆ –1 ಸಹಕಾರಿ ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದ ತೊಡಗಿಸಿಕೊಂಡಿರುವ ತಾವು ಬಹುಶಃ ಸಹಕಾರಿ ಕ್ಷೇತ್ರದ ಎಲ್ಲ ವಿಭಾಗಗಳ ಕಾರ್ಯಚಟುವಟಿಕೆಗಳ ಪರಿಚಯವುಳ್ಳವರಾಗಿದ್ದೀರಿ. ವಿಶೇಷವಾಗಿ ಅರ್ಬನ್ ಕ್ರೆಡಿಟ್ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ್ದೀರಿ ಎಂದು ನಾನು ತಿಳಿದಿದ್ದೇನೆ. ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಬಡ್ಜೆಟ್ ಒಂದು ಮುಖ್ಯವಾದ ಅಂಶವಾದರೂ ಅದರ ಸಿದ್ಧತೆಗೆ ಹಾಗೂ ಅದರ ಅನುಷ್ಠಾನಕ್ಕೆ ಸಹಕಾರಿವಲಯದಲ್ಲಿ ನೀಡಬೇಕಾದ ಮಹತ್ವ ನೀಡುತ್ತಿಲ್ಲ. ಹೀಗಾಗಿ ಸಹಕಾರಿ ಸಂಘಗಳು ಪ್ರತಿವರ್ಷ ಅವರ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಮಂಡಿಸುವ ಆಯ-ವ್ಯಯ ತಃಖ್ತೆ ಸಿದ್ಧಪಡಿಸುವ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ನಮ್ಮ ಸ್ವಾಭಿಮಾನಿ ಸಹಕಾರಿ ಪತ್ರಿಕೆ ಓದುಗರಿಗೆ ತಿಳಿಸಿಕೊಡ್ತಿರಾ?

ಉತ್ತರ : ಆಗಬಹುದು

ಪ್ರಶ್ನೆ –2 ಆಯವ್ಯಯ ಎಂದರೇನು, ಈ ಪದವನ್ನು ತಾವೂ ಹೇಗೆ ಅರ್ಥೈಸುತ್ತೀರಿ?

ಉತ್ತರ : 'ಬಡ್ಜೆಟ್' ಮತ್ತು 'ಆಯ-ವ್ಯಯ' ಪದಗಳ ಬಳಕೆ ಬಗ್ಗೆ ಸರಿಯಾದ ಮಾಹಿತಿ ಬೇಕು ಯಾಕೆಂದರೆ ಇಂಗ್ಲೀಷನ ಬಡ್ಜೆಟ ಪದಕ್ಕೆ ಕನ್ನಡದ ಆಯ-ವ್ಯಯ ಪದ ಸರಿಯಾದ ಅರ್ಥವೆನಿಸುವುದಿಲ್ಲ ಬಡ್ಜೆಟ ಪದಕ್ಕೆ ಸಹಕಾರಿ ಸಂಸ್ಥೆಯ ಮುಂದಿನ ವರ್ಷದ ಸಂಪೂರ್ಣ ಆರ್ಥಿಕ ಯೋಜನೆ ಎಂದು ಅರ್ಥೈಸಬಹುದು. ಆದರೆ ಆಯು-ವ್ಯಯ ಎಂದರೆ ಕೇವಲ ಇನಕಮ್ ಮತ್ತು ಎಕ್ಸಪೆಂಡಿಚರ್ ಎಂದು ಅರ್ಥವಾಗುತ್ತದೆ. ಹಾಗಾಗಿ ಇದಕ್ಕೆ ಸಮಗ್ರ ಅರ್ಥಕಲ್ಪಿಸುವ ಸೂಕ್ತ ಪದದ ಬಳಕೆ ಬಗ್ಗೆ ಚಿಂತನೆಯಾಗಬೇಕು. ಆಡು (ರೂಢಿ) ಭಾಷೆಯಲ್ಲಿ ಬಡ್ಜೆಟ್ ಎಂದರೆ ತಪ್ಪೇನಿಲ್ಲ.

ಸಹಕಾರಿ ಸಂಸ್ಥೆಗಳು ಆರ್ಥಿಕ ಸಂಘಟನೆಗಳು. ಬಟ್ಜೆಟ್ ಸಹಕಾರಿ ಸಂಸ್ಥೆಯ ಅಭಿವೃದ್ಧಿಯ ಪ್ರಮುಖ ಹಾಗೂ ಪರಿಣಾಮಕಾರಿ ಸಾಧನ ಎಂಬ ಬಗ್ಗೆ ಆಡಳಿತ ನಿರ್ವಹಣೆಯ ಹಂತದಲ್ಲಿ ಸಹಕಾರಿಗಳು ಸ್ವೀಕರಿಬೇಕು. ಬಡ್ಜೆಟಗೆ ನಾವು ಸಹಕಾರಿಗಳು ಕೊಡುವ ಮಹತ್ವದ ಬಗ್ಗೆ ಅವಲೋಕಿಸಿದಾಗ  ಮಾರ್ಚ 31 ಕ್ಕೆ ಲೆಕ್ಕ ಪತ್ರಗಳು ಮುಗಿದು ಸೆಪ್ಟೆಂಬರಲ್ಲಿ ಸಾಮಾನ್ಯ ಸಭೆ ನಡೆಯುವ ವರೆಗೆ 1/2 ವರ್ಷ ಕಳೆದಿರುತ್ತದೆ. ಆ ಸಮಯದಲ್ಲಿ ಬಟ್ಜೆಟ್ಗೆ ಮಂಜೂರಾತಿ ನೀಡಿದರೆ ಅದಕ್ಕೆ ಅರ್ಥವೆ ಇರುವುದಿಲ್ಲ ಹೀಗಾಗಿ ಅದೊಂದು ಸಾಂಪ್ರದಾಯಿಕವಾಗಿ ವಾರ್ಷಿಕ ಸಾಮಾನ್ಯ ಸಭೆಯ ವಿಷಯವಾಗಿದೆ. ಇದನ್ನು ವೈಜ್ಞಾನಿಕ ರೀತಿಯಲ್ಲಿ ಸಿದ್ಧಪಡಿಸುವ ವ್ಯವಸ್ಥೆಯನ್ನು ರೂಢಿಸಿಕೊಳ್ಳುವುದು ಅವಶ್ಯಕ. ಅತ್ಯಂತ ಮಹತ್ವದ ವಿಷಯುವನ್ನಾಗಿ ಪರಿಗಣಿಸುವ ಮನೋಭಾವ ಬೆಳೆಸಿಕೊಳ್ಳುವುದು ಅಷ್ಟೆ ಅವಶ್ಯಕ.

ಆಡಳಿತ ಮಂಡಳಿಯವರು ಈ ವಿಷಯದಲ್ಲಿ ಹೆಚ್ಚು ಆಸಕ್ತಿವಹಿಸುವ ಹಾಗೆ ಅವರಿಗೆ ತರಬೇತಿಯನ್ನು ಕೊಡಬೇಕು. ಬಡ್ಜೆಟ್ ಸಿದ್ಧತೆಯಲ್ಲಿ ಆಡಳಿತ ಮಂಡಳಿಯವರ ಪಾಲುಗಾರಿಕೆ ಅವಶ್ಯಕ ಬಟ್ಜೆಟ್ ಸಿದ್ಧಪಡಿಸುವ ಕಲೆಯ ಬಗ್ಗೆ ಅಧ್ಯಯನವಾಗಬೇಕು. ವಿವಿಧ ಹಂತಗಳಲ್ಲಿ ಈ ಬಗ್ಗೆ ವ್ಯಾಪಕ ಚರ್ಚೆಯ ಅವಶ್ಯಕತೆಯಿದೆ.

ಪ್ರಶ್ನೆ –3 ಆಯ-ವ್ಯಯ ಸಿದ್ಧಪಡಿಸುವಾಗ ಗಮನಿಸಬೇಕಾದ ಪ್ರಮುಖ ಅಂಶಗಳ ಬಗ್ಗೆ ತಿಳಿಸುತ್ತೀರಾ ?

ಉತ್ತರ : ಬಡ್ಜೆಟ್ ಅಂದರೆ ಗುರಿ ನಿಗದಿಪಡಿಸುವುದಲ್ಲ. ಆದಾಯ ಆಧಾರಿತ ಅಥವಾ ವೆಚ್ಚಗಳ ಆಧಾರಿತ ಬಡ್ಜೆಟ್ ಸಿದ್ಧಪಡಿಸಬೇಕು. ಬಡ್ಜೆಟ್ ಸಿದ್ಧಪಡಿಸುವಾಗ ಸಹಕಾರಿಯ ಅಭಿವೃದ್ಧಿಯತ್ತ ಗಮನದಲ್ಲಿರಬೇಕು. ಮುಂದಾಲೋಚನೆ ಬೇಕು.  ಈ ವರ್ಷದ ಸಾಮಾನ್ಯ ಲಾಭ (ಗ್ರಾಸ್‌ಪ್ರಾಫಿಟ್) ಬರುವ ವರ್ಷದ ಸಾಮಾನ್ಯ ವೆಚ್ಚಗಳಿಗೆ ಸರಿದೂಗಿಸುವ ತಳಹದಿಯನ್ನಾಗಿಸಿಕೊಳ್ಳಬಹುದು. ಸಂಪನ್ಮೂಲ ಕ್ರೋಢೀಕರಣ ವೆಚ್ಚ, ಪ್ರತಿ ಸಿಬ್ಬಂದಿಯಿಂದ ಆದಾಯ ಹಾಗೂ ವೆಚ್ಚಗಳ ಬಗ್ಗೆ ಗಮನವಿರಬೇಕು. ಈ ಬಗ್ಗೆ ಕೆಲವು ಸೂತ್ರಗಳನ್ನು ಸಿದ್ಧಪಡಿಸಿ ಸಂಯುಕ್ತ ಸಹಕಾರಿಯವರು ಎಲ್ಲ ಸಹಕಾರಿಗಳಿಗೆ ಕಳುಹಿಸಬೇಕು. ಬಡ್ಜೆಟ್ ಸಿದ್ಧಪಡಿಸುವ ಬಗ್ಗೆ ತರಬೇತಿ ನೀಡಬೇಕು.

ಪ್ರಶ್ನೆ  –4 ಆಯ-ವ್ಯಯ ಸಿದ್ಧಪಡಿಸುವ ಮುನ್ನ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಗಳ ಬಗ್ಗೆ ತಿಳಿಸುತ್ತೀರಾ?

ಉತ್ತರ : ಸಾಮಾನ್ಯವಾಗಿ ಒಂದು ಸಹಕಾರಿಯಲ್ಲಿ ವಾರ್ಷಿಕ ಶೇಕಡಾ 20% ಬೆಳವಣಿಗೆ ಇದ್ದೆ ಇರುತ್ತದೆ. ಇದಕ್ಕಿಂತಲೂ ಹೆಚ್ಚಿಗೆ ಬೆಳವಣಿಗೆ ಇದ್ದರೆ ಒಳ್ಳೆಯದು ಇದನ್ನು ಗಮನಿಸುವುದರ ಜೊತೆಗೆ ಸಹಕಾರಿಯ ಉಪವಿಧಿಗಳಲ್ಲಿಯ ಉದ್ದೇಶಗಳು, ಕಳೆದ ವರ್ಷದ ಲೆಕ್ಕ ಪತ್ರಗಳು, ಕಳೆದ ವರ್ಷದ ಯೋಜನೆಗಳು ಈ ವರ್ಷದ ಯೋಜನೆಗಳು ಕಾರ್ಯವ್ಯಾಪ್ತಿಯಲ್ಲಿನ ಹಣಕಾಸಿನ ಸಂಸ್ಥೆಗಳ ಕಾರ್ಯಚಟುವಟಿಕೆಗಳು, ಹಿರಿಯ ಸಹಕಾರಿಗಳ ತಜ್ಞರ ಸಲಹೆಗಳು, ಲಭ್ಯವಿರುವ ಸ್ಥಳೀಯ ಸ್ವಾಭಾವಿಕ ಸಂಪನ್ಮೂಲಗಳು, ಆರ್ಥಿಕ ಸಂಪನ್ಮೂಲಗಳು, ಲಭ್ಯವಿರುವ ಮಾನವ ಸಂಪನ್ಮೂಲಗಳು ಇವೆಲ್ಲವುಗಳ ಲಭ್ಯತೆ ಬಗ್ಗ  ಹಲವು ಸುತ್ತು ವಿವಿಧ ಸಹಕಾರಿಗಳ, ಅಧಿಕಾರಿಗಳ ಹಾಗೂ ಆಡಳಿತ ಮಂಡಳಿಯ ಸಭೆ ನಡೆದು ಚಿಂತನೆ ನಡೆಯಬೇಕು. ಒಂದು ಕರಡು ಸಿದ್ಧಪಡಿಸಬೇಕು ನಂತರ ಅಂತಿಮ ಸ್ವರೂಪ ನೀಡಿ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದು ಕಾರ್ಯಗತ ಮಾಡಿದಲ್ಲಿ ನಿಜವಾದ ಬಡ್ಜೆಟ್ ಅನಿಸಬಹುದು.

ಪ್ರಶ್ನೆ –5  ಸಹಕಾರಿ ಸಂಸ್ಥೆಯ ಆಯ-ವ್ಯಯ ಹೇಗಿರಬೇಕು?

ಉತ್ತರ : ಸಹಕಾರಿಯ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರಬೇಕು. ವೈಜ್ಞಾನಿಕವಾಗಿರಬೇಕು. ಒಂದು ಸಹಕಾರಿಯ ಅಭಿವೃದ್ಧಿಯ ಸಾಧನವಾಗಬೇಕು. ಸಮಗ್ರ ವ್ಯವಹಾರಗಳ ಕೈಗನ್ನಡಿಯಾಗಬೇಕು.

ಪ್ರಶ್ನೆ –6 ಆಯ-ವ್ಯಯ ಸಿದ್ಧಪಡಿಸಲು ಸೂಕ್ತ ಸಮಯ (ತಿಂಗಳು) ಯಾವುದು?

ಉತ್ತರ : ಸದ್ಯದ ವ್ಯವಸ್ಥೆಯಲ್ಲಿ ಬಡ್ಜೆಟ್‌ನ್ನು ಸಾಮಾನ್ಯ ಸಭೆಯಲ್ಲಿಯೆ ಅಂದರೆ ಸೆಪ್ಟೆಂಬರವರೆಗೆ ಅನುಮೋದನೆ ಪಡೆಯಬೇಕಾಗಿದೆ. ಆದರೆ ಆರ್ಥಿಕ ವರ್ಷ ಪ್ರಾರಂಭಕ್ಕೆ ಮುನ್ನ ಅಂದರೆ ಮಾರ್ಚ ತಿಂಗಳಿನಲ್ಲಿಯೆ ಬಡ್ಜೆಟ್ ಸಿದ್ಧಪಡಿಸಿದರೆ ಅದಕ್ಕೆ ನಿಜವಾದ ಅರ್ಥಬರುತ್ತದೆ. ಆದ್ದರಿಂದ ಬಟ್ಜೆಟ್ ಅನುಮೋದನೆಯನ್ನು ಪ್ರತ್ಯೇಕ ವಿಶೇಷ ಸಭೆಯಲ್ಲಿ ವರ್ಷ ಪ್ರಾರಂಭಕ್ಕೆ ಮುನ್ನವೇ ಅಂದರೆ ಮಾರ್ಚ್ ಮಾಹೆಯಲ್ಲಿ ಕರೆಯುವ ವ್ಯವಸ್ಥೆ ಜಾರಿಗೆ ಬಂದರೆ ಒಳ್ಳೆಯದು. ಅಥವಾ ಪ್ರಾತಿನಿಧಿಕ ಸಭೆಯನ್ನಾದರೂ ಕರೆದು ಬಡ್ಜೆಟ್ ಅನುಮೋದನೆ ಪಡೆಯುವ ಅವಕಾಶವಿರಬೇಕು. ಅಂದರೆ ಅದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ.

(6ನೇ ಪುಟಕ್ಕೆ)

## ನೂತನವಾಗಿ ಆಯ್ಕೆಯಾಗಿರುವ ವಿವಿಧ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳು




ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾಗಿ ಶ್ರೀ ಹೆಚ್.ಕೆ.ಪಾಟೀಲ್, ಉಪಾಧ್ಯಕ್ಷರಾಗಿ ಶ್ರೀ ಪಾಟೀಲ್




ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಶ್ರೀ ಆರ್.ಎಮ್. ಮಂಜುನಾಥಗೌಡ, ಉಪಾಧ್ಯಕ್ಷರಾಗಿ ಶ್ರೀ ಚೊಕ್ಕಬಸನಗೌಡ





ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಶ್ರೀ ಜಿ.ಟಿ.ದೇವೆಗೌಡ, ಉಪಾಧ್ಯಕ್ಷರಾಗಿ ಶ್ರೀ ಉಮಾಕಾಂತ ನಾಗಮಾರಪ
ನಿರ್ದೇಶಕರಾಗಿ ಶ್ರೀ ವಿಶ್ವನಾಥ ಚ. ಹಿರೇಮಠ



ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಅಧ್ಯಕ್ಷರಾಗಿ ಶ್ರೀ ಹಾಲಪ್ಪ ಆಚಾರ್



ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿ ಶ್ರೀ ಹೆಚ್.ವಿ.ರಾಜೀವ



ಉಡುಪಿ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾಗಿ ಶ್ರೀ ಎಮ್. ಗೋಪಿಕೃಷ್ಣರಾವ್



ಚಿಕ್ಕಮಗಳೂರು ಜಿಲ್ಲಾ ಸಹಕಾರ ಯೂನಿಯನ ಅಧ್ಯಕ್ಷರಾಗಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿ ಶ್ರೀ ಯಡಗೆರೆ ಸುಬ್ರಮಣ್ಯ



ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾ ಮಂಡಳದ ಅಧ್ಯಕ್ಷರಾಗಿ ಶ್ರೀಮತಿ ಶಕುಂತಲಾ ಬೆಲ್ದಾಳೆ

## ಮಾನ್ವಿ ಪಟ್ಟಣ ಸಹಕಾರ ಬ್ಯಾಂಕಿಗೆ 1.44 ಕೋಟಿ ರೂ. ನಿವ್ವಳ ಲಾಭ

2009–10ನೇ ಸಾಲಿಗೆ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕು 1.44 ಕೋಟಿ ರೂಗಳ ನಿವ್ವಳ ಲಾಭ ಗಳಿಸಿ ಹೈದರಾಬಾದ ಕರ್ನಾಟಕ ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಲಾಭ ಗಳಿಸಿರುವ ಬ್ಯಾಂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 31–03–2010ಕ್ಕೆ ಈ ಬ್ಯಾಂಕಿನ ಷೇರು ಬಂಡವಾಳ ರೂ 1.70.55 ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು ರೂ. 547.22 ಠೇವಣಿ ರೂ 2233.60 ಸಾಲ ಮತ್ತು ಮುಂಗಡಗಳು 1818.75 ದುಡಿಯುವ ಬಂಡವಾಳ ರೂ 3120.60 ಇದ್ದು ಬ್ಯಾಂಕಿನ ಒಟ್ಟು ಉತ್ಪಾದಕತೆ ರೂ. 4052.35 ಇರುವುದೆಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ನಾಗರಾಜರವರು ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ. ಬ್ಯಾಂಕಿನ ಒಬ್ಬ ಸಿಬ್ಬಂದಿಯ ಉತ್ಪಾದಕತೆ ರೂ. 675.40 ರೂಗಳಾಗಿದ್ದು ಈ ಸಾದನೆಯನ್ನು ಕಳೆದ 3 ವರ್ಷಗಳಿಂದ ಮುಂದುವರೆಸಿಕೊಂಡು ಬರಲಾಗುತ್ತಿದೆ ಎಂದು ತಿಳಿಸಿದ್ದಾರೆ.



### ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಮೇ ತಿಂಗಳ ಪ್ರವಾಸ ಕಾರ್ಯಕ್ರಮ


**ಶ್ರೀ ಎಸ್. ಆರ್. ಸತೀಶ್‌ಚಂದ್ರ,** ಅಧ್ಯಕ್ಷರು: 1, 16 ಬೆಂಗಳೂರು, 13, 14 ಶಿವಮೊಗ್ಗ, 15 ಹನುಮಸಾಗರ

**ಶ್ರೀ ಗುರುನಾಥ ಜ್ಯಾಂತಿಕರ,** ಉಪಾಧ್ಯಕ್ಷರು: 1, 13, 14 ಬೆಂಗಳೂರು, 5 ಬೆಳಗಾವಿ, 8, 9 ಶಿರಡಿ, 15 ಕೊಪ್ಪಳ / ಹನುಮಸಾಗರ, 16 ಬಿದರ

## ಸುಕೋ ಬ್ಯಾಂಕ್ ರೂ 86 ಲಕ್ಷ ಲಾಭ ಸದಸ್ಯರಿಗೆ 14% ಡಿವಿಡೆಂಡ್

ಬಳ್ಳಾರಿ ಜಿಲ್ಲೆಯ ಸಿಂಧನೂರು ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ 2009–10 ನೇ ಸಾಲಿನಲ್ಲಿ ರೂ 86 ಲಕ್ಷ ಲಾಭ ಗಳಿಸಿ ಸದಸ್ಯರಿಗೆ 14% ಡಿವಿಡೆಂಡ್ ನೀಡಿದೆ. ರೂ 111 ಕೋಟಿ ರೂಗಳ ವ್ಯವಹಾರ ಸಾಧಿಸಿರುವ ಈ ಬ್ಯಾಂಕು ರಾಜ್ಯಾದ್ಯಂತ 9 ಶಾಖೆಗಳನ್ನು ಹೊಂದಿದೆ. ಅವುಗಳಲ್ಲಿ ಬಳ್ಳಾರಿ, ಹುಬ್ಬಳ್ಳಿ ಸಿಂಧನೂರುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಬ್ಯಾಂಕು ಸದ್ಯದಲ್ಲಿಯೆ ಬೆಂಗಳೂರಿನಲ್ಲಿ ಶಾಖೆಯನ್ನು ತೆರೆಯಲಿದೆ ಸುಕೋ ಬ್ಯಾಂಕಿನಲ್ಲಿ ಲೀನಗೊಂಡ ವರ್ಧಮಾನ ಸಹಕಾರಿ ಬ್ಯಾಂಕಿನ 7 ಕೋಟಿ ರೂಗಳ ನಷ್ಟ ಬಳ್ಳಾರಿ ಮಹಿಳಾ ಶಕ್ತಿ ಬ್ಯಾಂಕಿನ 60 ಲಕ್ಷ ರೂಗಳ ನಷ್ಟಗಳನ್ನು ಸರಿದೂಗಿಸುವುದರ ಜೊತೆಗೆ ಪ್ರಾಪಂಚಿಕ ಆರ್ಥಿಕ ಹಿನ್ನಡೆಯಲ್ಲಿಯೂ ಶೇಕಡಾ 25% ಪ್ರಗತಿ ಸಾಧಿಸಿರುವುದು ನಮ್ಮ ಸಾಧನೆಯೆಂದು ಬ್ಯಾಂಕಿನ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ಸ್ವಾಭಿಮಾನಿ ಸಹಕಾರಿಗೆ ತಿಳಿಸಿದರು.

ಶ್ರೀಯುತರು ಮಾತನಾಡುತ್ತ ದೇಶದ ಖಾಸಗಿ ಹಾಗೂ ಸರಕಾರಿ ಸ್ವಾಮ್ಯದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸದ್ಯದಲ್ಲೆಯೇ ಸುಮಾರು 2 ಲಕ್ಷ ಉದ್ಯೋಗಗಳ ಸೃಷ್ಟಿಯಾಗಲಿದ್ದು ಸಹಜವಾಗಿ ಸಹಕಾರ ಕ್ಷೇತ್ರದಲ್ಲಿ ಉತ್ತಮ ವಿದ್ಯಾರ್ಹತೆಯುಳ್ಳ ಕ್ರಿಯಾಶೀಲ ಅರ್ಹ ಅಭ್ಯರ್ಥಿಗಳ ಕೊರತೆ ಕಾಣಬಹುದು. ಈ ಹಿನ್ನೆಲೆಯಲ್ಲಿ 30 ಟ್ರೇನಿ ಅಭ್ಯರ್ಥಿಗಳನ್ನು ಬ್ಯಾಂಕು ನೇಮಕ ಮಾಡಿಕೊಳ್ಳಲಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಟ.ಸಿ.ಎಸ್. 50:50 ಪ್ರಮಾಣದಲ್ಲಿ ಬ್ಯಾಂಕಿನಲ್ಲಿ c-edge ಮೂಲಕ core ಬ್ಯಾಂಕಿಂಗ್ ಅಳವಡಿಸಿದೆ. ಎಸ್.ಬಿ.ಐ ನವರು ಬಳಸಿದ ಸಾಫ್ಟವೇರನ್ನೆ ನಮ್ಮ ಬ್ಯಾಂಕಿನಲ್ಲಿ ಬಳಸಲಾಗುತ್ತಿದೆ. ಎಸ್.ಬಿ.ಐ ಸುಕೋ ಕಾರ್ಡ ಬಳಕೆ ಪ್ರಾರಂಭಿಸಲಾಗಿದೆ ಇದು ಜನಪ್ರಿಯವಾಗುತ್ತಿದೆ ಎಂದು ತಿಳಿಸಿದರು



ಲ್ಲಿ,

## ಸಂಪೂರ್ಣ ಮಹಿಳಾ ಸಿಬ್ಬಂದಿಯ ಕಾರ್ಯನಿರ್ವಹಣೆಯ ಕಾವೇರಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನೇರಲಿ ಗ್ರಾಮದ ಕಾವೇರಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಗ್ರಾಮೀಣ ಜನರ ಆರ್ಥಿಕ ಸ್ಥಿತಿ ಬಲಪಡಿಸುವುದರ ಜೊತೆಗೆ ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ವಿಶೇಷ ಸೇವೆಗಳನ್ನು ಒದಗಿಸುತ್ತಿರುವುದು ಹೆಮ್ಮೆಯ ವಿಷಯ. 30–9–2008 ರಂದು ಪ್ರಾರಂಭವಾಗಿರುವ ಸಂಪೂರ್ಣ ಗಣಕೀಕರಣ ಹೊಂದಿದೆ. ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ಮಹಿಳಾ ಸಿಬ್ಬಂದಿಯವರೆ ಕಾರ್ಯ ನಿರ್ವಹಿಸುತ್ತಿರುವುದು ಒಂದು ವಿಶೇಷ. ಗ್ರಾಮೀಣ ಮಕ್ಕಳಿಗಾಗಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದಕ್ಕಾಗಿ ಕಾವೇರಿ ಪೂರ್ವ ಪ್ರಾಥಮಿಕ ಕನ್ನಡ ಮಾದರಿಯ ಶಾಲೆಯನ್ನು ಆರಂಭಿಸಿದೆ. ಸದಸ್ಯರ ಹಾಗೂ ಸಾರ್ವಜನಿಕರ ಉತ್ತಮ ಆರೋಗ್ಯದ ದೃಷ್ಟಿಯಿಂದ ಪ್ರಾಣಾಯಾಮ ಶಿಬಿರ ಮಕ್ಕಳಿಗಾಗಿ ವಿವಿಧ ರೀತಿಯ ಆಟಗಳನ್ನು ಏರ್ಪಡಿಸಿ ವೈವಿಧ್ಯಮಯ ಚಟುವಟಿಕೆಗಳನ್ನು ಹಮ್ಮಿಕೊಂಡು ಸಾರ್ವಜನಿಕರ ಗಮನ ಸೆಳೆದಿದೆ.

ಈ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಶ್ರೀ ಬಾಬುರಾವ ಆರ್.ಕಾವೇರಿ ಸಂಸ್ಥಾಪಕರು, ಶ್ರೀ ಆನಂದ ಬಿ.ಕಾವೇರಿ ಅಧ್ಯಕ್ಷರು, ಶ್ರೀ ರಾವಸಾಹೇಬ ಎಸ್.ಪಾಟೀಲ್ ಉಪಾಧ್ಯಕ್ಷರು, ನಿರ್ದೇಶಕರುಗಳಾಗಿ ಶ್ರೀ ಬಾಳಯ್ಯ ಎಮ್.ಮಠಪತಿ ಶ್ರೀ ಶಂಕರ ವಿ.ಬೆಲ್ವಾಡ, ಶ್ರೀ ಶಿವಾಜಿ ಸಿ ಭೋವಿ, ಶಿವಲಿಂಗ ಜಿ ಮಡಿವಾಳ, ಶ್ರೀ ಸಂಜೀವ ಎಸ್. ಭೌಡಾಜ, ಶ್ರೀ ರಾಜೇಂದ್ರ ಬಿ ಖಾತೆದಾರ, ಶ್ರೀಮತಿ ವಂದನಾ ಎಸ್.ಕಾವೇರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀಮತಿ ಕವಿತಾ ಎ.ಪರ್ವತರಾವ ಕಾರ್ಯ ನಿರ್ವಹಿಸುತ್ತಿದ್ದಾರೆ.



ಶ್ರೀ ಬಾಬುರಾವ ಆರ್.ಕಾವೇರಿ ಸಂಸ್ಥಾಪಕರು





ಶ್ರೀ ಆನಂದ ಬಿ.ಕಾವೇರಿ ಅಧ್ಯಕ್ಷರು
ಶ್ರೀ ರಾವಸಾಹೇಬ ಎಸ್.ಪಾಟೀಲ್ ಉಪಾಧ್ಯಕ್ಷರು


## ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಬಂಧಿಸಿದಂತೆ ವಿಜಾಪೂರದಲ್ಲಿ ಪತ್ರಿಕಾಗೋಷ್ಠಿ



ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಬಂದಿಸಿದಂತೆ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ವಿಜಾಪೂರದ ಸಿದ್ಧಸಿರಿ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ಬೆಳಿಗ್ಗೆ 10–00 ಘಂಟೆಗೆ ಪತ್ರಿಕಾಗೋಷ್ಠಿಯನ್ನು ನಡೆಸಿದರು. ಸಂಯುಕ್ತ ಸಹಕಾಇಯ ನಿರ್ದೇಶಕರುಗಳಾದ ಶ್ರೀ ವಿಠ್ಠಲಗೌಡ ಬಿರಾದಾರ, ಸಾಗರ ಚವಜ,ಸಿದ್ಧಸಿರಿ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಶಂಕರಗೌಡ ಪಾಟೀಲ್ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರಿ ರಾಘು ಅಣ್ಣಿಗೇರಿ ಶ್ರೀ ರಾಜಶೇಖರಸ್ವಾಮಿ ಅಥಣಿಯ ವೆಂಕಟೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಅನಂತ ಕುಲಕರ್ಣಿ ಸಿಂಡಿಕೇಟ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅಮರನಾಥ ಬಿರಾದಾರ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ ಕುಮಾರ ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನ ರವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಸಂಯುಕ್ತ ಸಹಕಾರಿ ಅಧ್ಯಕ್ಷ | ಶ್ರೀ ಎಸ್.ಆರ್.ಸತೀಶಚಂದ್ರ | 9448696108 |
| ಸಂಯುಕ್ತ ಸಹಕಾರಿ ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕ | ಶ್ರೀ ನಾರಾಯಣ ಹೆಗಡೆ | 9480579882 |
| ಸಂಯುಕ್ತ ಸಹಕಾರಿ ತರಬೇತಿ ಅಧಿಕಾರಿ | ಶ್ರೀ ವಿ.ಜೆ.ಕಾರಕೂನ | 9482734077 |
| ಸಂಯುಕ್ತ ಸಹಕಾರಿ ಡಿಜಿಎಂ | ಶ್ರೀ ವೈ ಕುಮಾರ | 9845893455 |



ಲ್ಲಿ,

## ಸುಕೋ ಬ್ಯಾಂಕ್ ರೂ 86 ಲಕ್ಷ ಲಾಭ ಸದಸ್ಯರಿಗೆ 14% ಡಿವಿಡೆಂಡ್

ಬಳ್ಳಾರಿ ಜಿಲ್ಲೆಯ ಸಿಂಧನೂರು ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ 2009–10 ನೇ ಸಾಲಿನಲ್ಲಿ ರೂ 86 ಲಕ್ಷ ಲಾಭ ಗಳಿಸಿ ಸದಸ್ಯರಿಗೆ 14% ಡಿವಿಡೆಂಡ್ ನೀಡಿದೆ. ರೂ 111 ಕೋಟಿ ರೂಗಳ ವ್ಯವಹಾರ ಸಾಧಿಸಿರುವ ಈ ಬ್ಯಾಂಕು ರಾಜ್ಯಾದ್ಯಂತ 9 ಶಾಖೆಗಳನ್ನು ಹೊಂದಿದೆ. ಅವುಗಳಲ್ಲಿ ಬಳ್ಳಾರಿ, ಹುಬ್ಬಳ್ಳಿ ಸಿಂಧನೂರುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಬ್ಯಾಂಕು ಸದ್ಯದಲ್ಲಿಯೆ ಬೆಂಗಳೂರಿನಲ್ಲಿ ಶಾಖೆಯನ್ನು ತೆರೆಯಲಿದೆ ಸುಕೋ ಬ್ಯಾಂಕಿನಲ್ಲಿ ಲೀನಗೊಂಡ ವರ್ಧಮಾನ ಸಹಕಾರಿ ಬ್ಯಾಂಕಿನ 7 ಕೋಟಿ ರೂಗಳ ನಷ್ಟ ಬಳ್ಳಾರಿ ಮಹಿಳಾ ಶಕ್ತಿ ಬ್ಯಾಂಕಿನ 60 ಲಕ್ಷ ರೂಗಳ ನಷ್ಟಗಳನ್ನು ಸರಿದೂಗಿಸುವುದರ ಜೊತೆಗೆ ಪ್ರಾಪಂಚಿಕ ಆರ್ಥಿಕ ಹಿನ್ನಡೆಯಲ್ಲಿಯೂ ಶೇಕಡಾ 25% ಪ್ರಗತಿ ಸಾಧಿಸಿರುವುದು ನಮ್ಮ ಸಾಧನೆಯೆಂದು ಬ್ಯಾಂಕಿನ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ಸ್ವಾಭಿಮಾನಿ ಸಹಕಾರಿಗೆ ತಿಳಿಸಿದರು.

ಶ್ರೀಯುತರು ಮಾತನಾಡುತ್ತ ದೇಶದ ಖಾಸಗಿ ಹಾಗೂ ಸರಕಾರಿ ಸ್ವಾಮ್ಯದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸದ್ಯದಲ್ಲೆಯೇ ಸುಮಾರು 2 ಲಕ್ಷ ಉದ್ಯೋಗಗಳ ಸೃಷ್ಟಿಯಾಗಲಿದ್ದು ಸಹಜವಾಗಿ ಸಹಕಾರ ಕ್ಷೇತ್ರದಲ್ಲಿ ಉತ್ತಮ ವಿದ್ಯಾರ್ಹತೆಯುಳ್ಳ ಕ್ರಿಯಾಶೀಲ ಅರ್ಹ ಅಭ್ಯರ್ಥಿಗಳ ಕೊರತೆ ಕಾಣಬಹುದು. ಈ ಹಿನ್ನೆಲೆಯಲ್ಲಿ 30 ಟ್ರೇನಿ ಅಭ್ಯರ್ಥಿಗಳನ್ನು ಬ್ಯಾಂಕು ನೇಮಕ ಮಾಡಿಕೊಳ್ಳಲಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಟ.ಸಿ.ಎಸ್. 50:50 ಪ್ರಮಾಣದಲ್ಲಿ ಬ್ಯಾಂಕಿನಲ್ಲಿ c-edge ಮೂಲಕ core ಬ್ಯಾಂಕಿಂಗ್ ಅಳವಡಿಸಿದೆ. ಎಸ್.ಬಿ.ಐ ನವರು ಬಳಸಿದ ಸಾಫ್ಟವೇರನ್ನೆ ನಮ್ಮ ಬ್ಯಾಂಕಿನಲ್ಲಿ ಬಳಸಲಾಗುತ್ತಿದೆ. ಎಸ್.ಬಿ.ಐ ಸುಕೋ ಕಾರ್ಡ ಬಳಕೆ ಪ್ರಾರಂಭಿಸಲಾಗಿದೆ ಇದು ಜನಪ್ರಿಯವಾಗುತ್ತಿದೆ ಎಂದು ತಿಳಿಸಿದರು

## ಸಂಪೂರ್ಣ ಮಹಿಳಾ ಸಿಬ್ಬಂದಿಯ ಕಾರ್ಯನಿರ್ವಹಣೆಯ ಕಾವೇರಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನೇರಲಿ ಗ್ರಾಮದ ಕಾವೇರಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಗ್ರಾಮೀಣ ಜನರ ಆರ್ಥಿಕ ಸ್ಥಿತಿ ಬಲಪಡಿಸುವುದರ ಜೊತೆಗೆ ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ವಿಶೇಷ ಸೇವೆಗಳನ್ನು ಒದಗಿಸುತ್ತಿರುವುದು ಹೆಮ್ಮೆಯ ವಿಷಯ. 30–9–2008 ರಂದು ಪ್ರಾರಂಭವಾಗಿರುವ ಸಂಪೂರ್ಣ ಗಣಕೀಕರಣ ಹೊಂದಿದೆ. ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ಮಹಿಳಾ ಸಿಬ್ಬಂದಿಯವರೆ ಕಾರ್ಯ ನಿರ್ವಹಿಸುತ್ತಿರುವುದು ಒಂದು ವಿಶೇಷ. ಗ್ರಾಮೀಣ ಮಕ್ಕಳಿಗಾಗಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದಕ್ಕಾಗಿ ಕಾವೇರಿ ಪೂರ್ವ ಪ್ರಾಥಮಿಕ ಕನ್ನಡ ಮಾದರಿಯ ಶಾಲೆಯನ್ನು ಆರಂಭಿಸಿದೆ. ಸದಸ್ಯರ ಹಾಗೂ ಸಾರ್ವಜನಿಕರ ಉತ್ತಮ ಆರೋಗ್ಯದ ದೃಷ್ಟಿಯಿಂದ ಪ್ರಾಣಾಯಾಮ ಶಿಬಿರ ಮಕ್ಕಳಿಗಾಗಿ ವಿವಿಧ ರೀತಿಯ ಆಟಗಳನ್ನು ಏರ್ಪಡಿಸಿ ವೈವಿಧ್ಯಮಯ ಚಟುವಟಿಕೆಗಳನ್ನು ಹಮ್ಮಿಕೊಂಡು ಸಾರ್ವಜನಿಕರ ಗಮನ ಸೆಳೆದಿದೆ.

ಈ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಶ್ರೀ ಬಾಬುರಾವ ಆರ್.ಕಾವೇರಿ ಸಂಸ್ಥಾಪಕರು, ಶ್ರೀ ಆನಂದ ಬಿ.ಕಾವೇರಿ ಅಧ್ಯಕ್ಷರು, ಶ್ರೀ ರಾವಸಾಹೇಬ ಎಸ್.ಪಾಟೀಲ್ ಉಪಾಧ್ಯಕ್ಷರು, ನಿರ್ದೇಶಕರುಗಳಾಗಿ ಶ್ರೀ ಬಾಳಯ್ಯ ಎಮ್.ಮಠಪತಿ ಶ್ರೀ ಶಂಕರ ವಿ.ಬೆಲ್ವಾಡ, ಶ್ರೀ ಶಿವಾಜಿ ಸಿ ಭೋವಿ, ಶಿವಲಿಂಗ ಜಿ ಮಡಿವಾಳ, ಶ್ರೀ ಸಂಜೀವ ಎಸ್. ಭೌಡಾಜ, ಶ್ರೀ ರಾಜೆಂದ್ರ ಬಿ ಖಾತೆದಾರ, ಶ್ರೀಮತಿ ವಂದನಾ ಎಸ್.ಕಾವೇರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀಮತಿ ಕವಿತಾ ಎ.ಪರ್ವತರಾವ ಕಾರ್ಯ ನಿರ್ವಹಿಸುತ್ತಿದ್ದಾರೆ.



ಶ್ರೀ ಬಾಬುರಾವ ಆರ್.ಕಾವೇರಿ ಸಂಸ್ಥಾಪಕರು





ಶ್ರೀ ಆನಂದ ಬಿ.ಕಾವೇರಿ ಅಧ್ಯಕ್ಷರು
ಶ್ರೀ ರಾವಸಾಹೇಬ ಎಸ್.ಪಾಟೀಲ್ ಉಪಾಧ್ಯಕ್ಷರು

## ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಬಂದಿಸಿದಂತೆ ವಿಜಾಪೂರದಲ್ಲಿ ಪತ್ರಿಕಾಗೋಷ್ಠಿ



ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಬಂದಿಸಿದಂತೆ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ವಿಜಾಪೂರದ ಸಿದ್ಧಸಿರಿ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ಬೆಳಿಗ್ಗೆ 10–00 ಘಂಟೆಗೆ ಪತ್ರಿಕಾಗೋಷ್ಠಿಯನ್ನು ನಡೆಸಿದರು. ಸಂಯುಕ್ತ ಸಹಕಾಇಯ ನಿರ್ದೇಶಕರುಗಳಾದ ಶ್ರೀ ವಿಠ್ಠಲಗೌಡ ಬಿರಾದಾರ, ಸಾಗರ ಚವಜ,ಸಿದ್ಧಸಿರಿ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಶಂಕರಗೌಡ ಪಾಟೀಲ್ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರಿ ರಾಘು ಅಣ್ಣಿಗೇರಿ ಶ್ರೀ ರಾಜಶೇಖರಸ್ವಾಮಿ ಅಥಣಿಯ ವೆಂಕಟೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಅನಂತ ಕುಲಕರ್ಣಿ ಸಿಂಡಿಕೇಟ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅಮರನಾಥ ಬಿರಾದಾರ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ ಕುಮಾರ ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನ ರವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಸಂಯುಕ್ತ ಸಹಕಾರಿ ಅಧ್ಯಕ್ಷ | ಶ್ರೀ ಎಸ್.ಆರ್.ಸತೀಶಚಂದ್ರ | 9448696108 |
| ಸಂಯುಕ್ತ ಸಹಕಾರಿ ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕ | ಶ್ರೀ ನಾರಾಯಣ ಹೆಗಡೆ | 9480579882 |
| ಸಂಯುಕ್ತ ಸಹಕಾರಿ ತರಬೇತಿ ಅಧಿಕಾರಿ | ಶ್ರೀ ವಿ.ಜೆ.ಕಾರಕೂನ | 9482734077 |
| ಸಂಯುಕ್ತ ಸಹಕಾರಿ ಡಿಜಿಎಂ | ಶ್ರೀ ವೈ ಕುಮಾರ | 9845893455 |

# ಸಂದರ್ಶನ

(3ನೇ ಪುಟದಿಂದ)

ಸಿಂಧನೂರ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನಲ್ಲಿ (ಸುಕೋ ಬ್ಯಾಂಕಿನಲ್ಲಿ) ಪ್ರತಿವರ್ಷ ಮಾರ್ಚ ಅಂತ್ಯಕ್ಕೆ ಬಡ್ಜೆಟ್ ಸಿದ್ಧಪಡಿಸುವ ವ್ಯವಸ್ಥೆ ಕಳೆದ 3 ವರ್ಷಗಳಿಂದ ಜಾರಿಯಲ್ಲಿದೆ. ಪ್ರತಿ ವರ್ಷ 2ನೇವಾರದಲ್ಲಿ ಎಲ್ಲ ಶಾಖೆಗಳ ಹಂತದಲ್ಲಿ ಬಡ್ಜೆಟ್ ಸಿದ್ಧಪಡಿಸುತ್ತೇವೆ. 3ನೇ ವಾರದಲ್ಲಿ ಕೇಂದ್ರಕಛೇರಿಯಲ್ಲಿ ಕ್ರೋಢೀಕೃತ ಬಡ್ಜೆಟ್ ಸಿಧ್ಧಪಡಿಸಿ ಮಾರ್ಚ್ 31ರ ಒಳಗೆ ಬಡ್ಜೆಟ್‌ಗೆ ಅಂತಿಮ ಸ್ವರೂಪ ನೀಡಲಾಗುತ್ತದೆ.

**ಪ್ರಶ್ನೆ –7 ಸಾಮಾನ್ಯವಾಗಿ ಸಹಕಾರಿ ಸಂಸ್ಥೆಗಳ ವಾರ್ಷಿಕ ಸರ್ವ ಸದಸ್ಯರ ಸಭೆ ಸೆಪ್ಟೆಂಬರ ಮಾಹೆಯಲ್ಲಿ ನಡೆಯುವಾಗ ಆಯವ್ಯಯವನ್ನು ಮಂಡಿಸುತ್ತಾರೆ. ಅಷ್ಟೊತ್ತಿಗಾಗಲೆ ಅರ್ದ ವರ್ಷ ಕಳೆದಿರುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಆಯ–ವ್ಯಯ ಮಂಡನೆಗೆ ನಿಜವಾದ ಅರ್ಥಬರುತ್ತದೆಯೆ? ಇದೊಂದು ಸರ್ವಸದಸ್ಯರ ಸಭೆಯ ಸಾಮಾನ್ಯ ಚಟುವಟಿಕೆಯಂತಾಗುವುದಿಲ್ಲವೇ? ನಿಮ್ಮ ಅಭಿಪ್ರಾಯವೇನು?**

ಉತ್ತರ : ಸದ್ಯದ ಪರಿಸ್ಥಿತಿಯಲ್ಲಿ ಬಡ್ಜೆಟ್ಗೆ ಅರ್ಥವೆ ಇರುವುದಿಲ್ಲ. ರಾಜ್ಯಮಟ್ಟದ ಹಾಗೂ ಜಿಲ್ಲಾಮಟ್ಟದ ಸಂಸ್ಥೆಗಳಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಖರ್ಚುವೆಚ್ಚಗಳಿಗಾಗಿ ಬಡ್ಜೆಟ್ ಬಗ್ಗೆ ಗಮನ ಹರಿಸಲಾಗುತ್ತದೆ. ಸಂಪನ್ಮೂಲ ಸಂಗ್ರಹಣೆಯ ಕಡೆಗಡ ಗಮನಕೊಡುವುದು ಕಡಿಮೆ. ಹಾಗೆಯೆ ಪ್ರಾಥಮಿಕ ಹಂತದ ಸಹಕಾರಿ ಸಂಸ್ಥೆಗಳಲ್ಲಿ ಅದರ ಬಗ್ಗೆ ಹೆಚ್ಚಿನ ಪ್ರಾಧಾನ್ಯತೆಯೆ ಇರುವುದಿಲ್ಲ. ಬಡ್ಜೆಟಗೆ ನಾವು ಸಹಕಾರಿಗಳು ಕೊಡುವ ಮಹತ್ವದ ಬಗ್ಗೆ ಅವಲೋಕಿಸಿದಾಗ ಮಾರ್ಚ್ 31 ಕ್ಕೆ ಲೆಕ್ಕ ಪತ್ರಗಳು ಮುಗಿದು ಸೆಪ್ಟೆಂಬರಲ್ಲಿ ಸಾಮಾನ್ಯ ಸಭೆ ನಡೆಯುವ ವರೆಗೆ 1/2 ವರ್ಷ ಕಳೆದಿರುತ್ತದೆ. ಆಸಮಯದಲ್ಲಿ ಬಟ್ಜೆಟ್ಗೆ ಮಂಜೂರಾತಿ ನೀಡಿದರೆ ಅದಕ್ಕೆ ಅರ್ಥವೆ ಇರುವುದಿಲ್ಲ ಹೀಗಾಗಿ ಅದೊಂದು ಸಾಂಪ್ರದಾಯಿಕವಾಗಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯುವ ವಿಷಯವಾಗಿದೆ. ಇದನ್ನು ವೈಜ್ಞಾನಿಕ ರೀತಿಯಲ್ಲಿ ಸಿದ್ಧಪಡಿಸುವ ವ್ಯವಸ್ಥೆಯನ್ನು ರೂಢಿಸಿಕೊಳ್ಳುವುದು ಅವಶ್ಯಕ. ಅತ್ಯಂತ ಮಹತ್ವದ ವಿಷಯುವನ್ನಾಗಿ ಪರಿಗಣಿಸುವ ಮನೋಭಾವ ಬೆಳೆಸಿಕೊಳ್ಳುವುದು ಅಷ್ಟೆ ಅವಶ್ಯಕ

**ಪ್ರಶ್ನೆ –8 ಸಹಕಾರಿ ಆಯ–ವ್ಯಯ, ಕಂಪನಿಗಳ ಆಯ–ವ್ಯಯ, ಸರಕಾರಿ ಆಯವ್ಯಯಗಳಲ್ಲಿ ಪ್ರಮುಖ ವ್ಯತ್ಯಾಸವೇನು?**

ಉತ್ತರ: ಸರಕಾರದಲ್ಲಿ ಹಣಕಾಸಿನ ವರ್ಷ ಪ್ರಾರಂಭಕ್ಕೆ ಮುನ್ನ 6 ತಿಂಗಳು ಚರ್ಚೆ ಪ್ರಾರಂಭವಾಗುತ್ತದೆ. ಬಡ್ಜೆಟ್ನಲ್ಲಿ ಅಳವಡಿಸಬಹುದಾದ ಸಮಗ್ರ ವಿಷಯಗಳ ವಿವಿಧ ಹಂತಗಳಲ್ಲಿ ಚರ್ಚೆಯಾಗುತ್ತದೆ. ಸರಕಾರದ ಸಂಪನ್ಮೂಲಗಳನ್ನು ಹೆಚ್ಚಿಸುವ ಹಾಗೂ ವಿವಿಧ ಯೋಜನೆಗಳಲ್ಲಿ ವೆಚ್ಚ ಮಾಡಬಹುದಾದ ವಿಷಯಗಳ ಬಗ್ಗೆ ಸಮಗ್ರ ಚರ್ಚೆಯಾದ ನಂತರ ಮಾರ್ಚ ತಿಂಗಳಲ್ಲಿ ವಿಧಾನ ಸಭೆಯ ಅಥವಾ ಲೋಕಸಭೆಯ ಅನುಮೋದನೆ ಪಡೆದನಂತರ ಏಪ್ರಿಲ್ ಒಂದರಿಂದ ಜಾರಿಗೆ ಬರುತ್ತದೆ. ಕಂಪನಿಗಳಲ್ಲಿ ಬಡ್ಜೆಟ ಸಿದ್ಧಪಡಿಸುವ ಜವಾಬ್ದಾರಿ ಆಡಳಿತ ಮಂಡಳಿಗೆ ಇದೆ. ಹೀಗಾಗಿ ಹಣಕಾಸಿನ ವರ್ಷ ಪ್ರಾರಂಭಕ್ಕೆ ಮುನ್ನವೇ ಬಡ್ಜೆಟ್ ಸಿದ್ಧವಿರುತ್ತದೆ.

ಸಹಕಾರಿ ಸಂಸ್ಥೆಗಳಲ್ಲಿ ಈ ವ್ಯವಸ್ಥೆ ಭಿನ್ನವಾಗಿದೆ. ವಾಣಿಜ್ಯ ಬ್ಯಾಂಕುಗಳ ತರಹ ಪೂರ್ವ ನಿಯೋಜಿತವಾಗಿರುವುದಿಲ್ಲ. ಬಡ್ಜೆಟ್‌ನ್ನು ಸಾಮಾನ್ಯ ಸಭೆಯಲ್ಲಿಯೆ ಅನುಮೋದನೆ ಪಡೆಯಬೇಕಾಗಿರುವ್ಯದರಿಂದ ಬಡ್ಜೆಟ್ ಅನುಮೋದನೆಗಾಗಿ ಪ್ರತ್ಯೇಕ ವಿಶೇಷ ಸಭೆಯನ್ನು ವರ್ಷ ಪ್ರಾರಂಭಕ್ಕೆ ಮುನ್ನವೇ ಅಂದರೆ ಮಾರ್ಚ ಮಾಹೆಯಲ್ಲಿ ಕರೆಯುವ ವ್ಯವಸ್ಥೆ ಜಾರಿಗೆ ಬರಬೇಕು. ಅಥವಾ ಪ್ರಾತಿನಿಧಿಕ ಸಭೆಯನ್ನಾದರೂ ಕರೆದು ಬಡ್ಜೆಟ್ ಅನುಮೋದನೆ ಪಡೆಯುವ ಅವಕಾಶವಿರಬೇಕು.

ಆಡಳಿತ ಮಂಡಳಿಯವರು ಈ ವಿಷಯದಲ್ಲಿ ಹೆಚ್ಚು ಆಸಕ್ತಿವಹಿಸುವ ಹಾಗೆ ಅವರಿಗೆ ತರಬೇತಿಯನ್ನು ಕೊಡಬೇಕು. ಬಡ್ಜೆಟ್ ಸಿದ್ಧತೆಯಲ್ಲಿ ಆಡಳಿತ ಮಂಡಳಿಯವರ ಪಾಲುಗಾರಿಕೆ ಹೆಚ್ಚಾಗಬೇಕು. ಬಡ್ಜೆಟ್ ಸಿದ್ಧಪಡಿಸುವ ಕಲೆಯ ಬಗ್ಗೆ ಅಧ್ಯಯನವಾಗಬೇಕು. ವಿವಿಧ ಹಂತಗಳಲ್ಲಿ ಈ ಬಗ್ಗೆ ವ್ಯಾಪಕ ಚರ್ಚೆಯ ಅವಶ್ಯಕತೆಯಿದೆ.

**ಪ್ರಶ್ನೆ –9 ಸಹಕಾರಿ ಸಂಸ್ಥೆಯ ಬೆಳವಣಿಗೆಗೆ ಆಯವ್ಯಯದ ಪಾತ್ರ ಎಷ್ಟು ಮಹತ್ವದ್ದು?**

ಉತ್ತರ : ಸಹಕಾರಿಯ ಬೆಳವಣಿಗೆ ದೃಷ್ಟಿಯಿಂದ ಬಡ್ಜೆಟ್‌ಗೆ ಹೆಚ್ಚಿನ ಮಹತ್ವವಿದೆ. ವೈಜ್ಞಾನಿಕವಾಗಿ ಸಹಕಾರಿ ಅಭಿವೃದ್ಧಿಯನ್ನೆ ಗಮನದಲ್ಲಿಟ್ಟು ಸಿದ್ಧಪಡಿಸಿರುವ ಬಡ್ಜೆಟನ್ನು ಅಧ್ಯಯನ ಮಾಡಿದರೆ ಸಹಕಾರಿಯ ಆರ್ಥಿಕ ಬೆಳವಣಿಗೆಯ ಬಗ್ಗೆ ಹಾಗೂ ಮುಂದಿನ ಯೋಜನೆಗಳ ಬಗ್ಗೆ ತಿಳಿದುಕೊಳ್ಳಬಹುದು.

**ಪ್ರಶ್ನೆ –10 ಆಯ–ವ್ಯಯ ಸಿದ್ಧತೆಯಲ್ಲಿ ಅಧ್ಯಕ್ಷರ, ನಿರ್ದೇಶಕ ಮಂಡಳಿಯ ಹಾಗೂ ಮುಖ್ಯ ಕಾರ್ಯನಿರ್ವಹಣಾದಿಕಾರಿಯ ಪಾತ್ರವೇನು, ತಿಳಿಸುವಿರಾ?**

ಉತ್ತರ : ಬಡ್ಜೆಟ್ ಸಿದ್ಧತೆಯಲ್ಲಿ ನೀವು ಕೇಳಿದ ಎಲ್ಲ ಮಹನೀಯರಿಗೂ ಮಹತ್ವದ ಪಾತ್ರವಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಕಳೆದ ವರ್ಷದ ಬಡ್ಜೆಟ್‌ನ ಪತ್ರಯಿಟ್ಟುಕೊಂಡು ಈ ವರ್ಷದ ಆಯ–ವ್ಯಯ ಪತ್ರಿಕೆ ನೋಡಿ ಅಂಕಿಸಂಖ್ಯೆಗಳನ್ನು ಬದಲಾಯಿಸುವುದು ಅದನ್ನು ಆಡಳಿತ ಮಂಡಳಿಯ ಅನುಮೋದನೆ ಪಡೆದು ವಾರ್ಷಿಕ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸಿದರೆ ಕೆಲಸ ಮುಗಿಯುವುದಿಲ್ಲ. ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಅಧ್ಯಕ್ಷರ ಜೊತೆಗೆ ಕುಳಿತು ಸಹಕಾರಿಯ ಪ್ರಸಕ್ತ ಸಾಲಿನ ಯೋಜನೆಗಳು ಅವುಗಳಲ್ಲಿ ಕಾರ್ಯಗತವಾದವುಗಳು ಕಾರ್ಯಗತವಾಗದೆ ಉಳಿದಿರುವ ಯೋಜನೆಗಳು ಮುಂದಿನ ಸಾಲಿನ ಕಾರ್ಯಯೋಜನೆಯ ಕರಡನ್ನು ಸಿದ್ಧಪಡಿಸಿ ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ ಅದಕ್ಕನುಸಾರವಾಗಿ ಬಡ್ಜೆಟ್ ಸಿದ್ಧಪಡಿಸಬೇಕು. ಆಡಳಿತ ಮಂಡಳಿಯವರು ಎಲ್ಲ ವಿಷಯಗಳ ಬಗ್ಗೆ ಆಳವಾದ ಅಧ್ಯಯನ ಮಾಡಿ ಬಡ್ಜೆಟ್ ಸಿದ್ಧಪಡಿಸಲು ಹಾಗೂ ಕಾರ್ಯಗತಮಾಡಲು ಸಹಕಾರನೀಡಬೇಕು.

**ಪ್ರಶ್ನೆ –11 ಆಯ–ವ್ಯಯ ಕ್ಕೆ ಸಂಬಂಧಿಸಿದಂತೆ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಹಕಾರಿಗಳು– ಅಧಿಕಾರಿಗಳು ಸದಸ್ಯರು ಇವರು ತಮ್ಮ ಪಾಲಿನ ಕರ್ತವ್ಯ ನಿರ್ವಹಣೆ ಬಗ್ಗೆ ತಮ್ಮ ಅಭಿಪ್ರಾಯವೇನು?**

ಉತ್ತರ: ಬಡ್ಜೆಟ್ನ ಕರಡು ಸಿದ್ಧಪಡಿಸುವಾಗ ಹಾಗೂ ಬಡ್ಜೆಟ್ ಸಿದ್ಧಪಡಿಸಿ ಅನುಮೋದನೆ ಪಡೆದ ಬಳಿಕ ಅದರಂತೆ ಕ್ರಮವಿಡುವುದರಲ್ಲಿ ವಿಶೇಷವಾಗಿ ವೆಚ್ಚಗಳ ನಿರ್ವಹಣೆಯಲ್ಲಿ ಹಾಗೂ ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ಅಧ್ಯಕ್ಷರಾದಿಯಾಗಿ ಎಲ್ಲ ನಿರ್ದೆಶಕರಿಗೆ ಹಾಗೂ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಯಿದೆ. ಬಡ್ಜೆಟ್ನಲ್ಲಿ ನಮೂದಿತವಾಗಿರುವ ವಿಷಯಗಳ ಆದ್ಯತಾ ವಲಯಗಳನ್ನು ಗುರುತಿಸಿಕೊಂಡು ಹೆಚ್ಚಿನ ಗಮನವಿಟ್ಟು ಕಾರ್ಯನಿರ್ವಹಿಸಿದಲ್ಲಿ ಸಂಸ್ಥೆಯ ಅಭಿವೃದ್ಧಿಗೆ ಪೂರಕವಾಗುತ್ತದೆ.

## “ಸಿಫಿನ್ ವಾರ್ತೆ”

ರಾಜ್ಯದ ಸೌಹಾರ್ದ ಸಹಕಾರಿಗಳನ್ನು ಉತ್ತಮ ಆರ್ಥಿಕ ಸಂಘಟನೆಗಳನ್ನಾಗಿಸುವ ಪ್ರಯತ್ನದ ಹಿನ್ನೆಲೆಯಲ್ಲಿ ದಿನಾಂಕ 21–8–2008ರಂದು ವಿಧಾನಸೌಧದ ಬಾಂಕ್ವೆಟ್ ಹಾಲ್ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸೌಹಾರ್ದ ಸಹಕಾರಿಗಳಲ್ಲಿ ಷೇರುಪೇಟೆ ವ್ಯವಹಾರಕ್ಕೆ ಚಾಲನೆ ನೀಡಿದ ನಂತರ ರಾಜ್ಯದ 10 ಸೌಹಾರ್ದ ಸಹಕಾರಿಗಳ 17 ಕೇಂದ್ರಗಳಲ್ಲಿ ಷೇರುಪೇಟೆ ವ್ಯವಹಾರ ಪ್ರಾರಂಭವಾಗಿದೆ. ಸೌಹಾರ್ದ ಸಹಕಾರಿಗಳು ಉತ್ತಮ ವ್ಯವಹಾರವನ್ನು ಮಾಡಿ ಉತ್ತಮ ಕಮೀಶನ್ ಗಳಿಸಿವೆ. ಕೇಂದ್ರಗಳಲ್ಲೇ ರೂ 7,89,471 ಕಮೀಶನ್ ಗಳಿಸಿದರೆ, ಬಸವೇಶ್ವರ ಸೌಹಾರ್ದ ಸಹಕಾರಿ ಸಂಕೇಶ್ವರ ಹೊಂದಿರುವ 6 ಶಾಖೆಗಳ ಮೂಲಕ ಕಮೀಶನ್ ಗಳಿಕೆಯಲ್ಲಿ ಎಲ್ಲ ಸಹಕಾರಿಗಳಿಗಿಂತ ಮುಂದಿದೆ.

ವಿವರಗಳು ಈ ರೀತಿ ಇವೆ.

| | | | | |
|---|---|---|---|---|
| ನಿಖರ ಸೌಹಾರ್ದ | ಬೆಂಗಳೂರು | 1 | 59,634.51 | |
| ಶ್ರುತಿ ಸೌಹಾರ್ದ | ಬೆಂಗಳೂರು | 1 | 62,925.22 | |
| ಅಶ್ವತ್ಥಪುರ ಸೌಹಾರ್ದ | ಬೆಂಗಳೂರು | 1 | 99,732.45 | |
| ಕೃಷಿಕ ಸೌಹಾರ್ದ | ಸಾಗರ | 1 | 140,034.78 | |
| ಸುಪ್ರಭಾತ ಸೌಹಾರ್ದ | ಅಂಕೋಲ | 1 | 336,769.36 | |
| ಸಪ್ತಗಿರಿ ಸೌಹಾರ್ದ | ಸಿಂಧನೂರ | 1 | 431,154.18 | |
| ಶ್ರೀ ಬಸವೇಶ್ವರ ಸೌಹಾರ್ದ | ಸಂಕೇಶ್ವರ | 6 | 454,530.60 | |
| ಶ್ರೀ ಸರಸ್ವತಿ ಸೌಹಾರ್ದ | ಪುತ್ತೂರು | 1 | 553,454.68 | 3 |
| ಹರಪನಹಳ್ಳಿ ಸೌಹಾರ್ದ | ಹರಪನಹಳ್ಳಿ | 1 | 588,707.50 | 2 |
| ಯಡಗೆರೆ ಸೌಹಾರ್ದ ಸಹಕಾರಿ | ಕೊಪ್ಪ | 2 | 789,471.78 | 1 |
| ಒಟ್ಟು ವ್ಯವಹಾರ | | | 3,516,415.06 | |

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ. ಕಚೇರಿ 080 42439700

ಶ್ರೀ ಎನ್.ಶಿವಕುಮಾರ ಬ್ಯುಸಿನೆಸ್ ಡೆವಲಪಮೆಂಡ್ ಮೆನೆಜರ್ 9449848440

## ದಶಮಾನೋತ್ಸವ ಸಂಭ್ರಮದಲ್ಲಿ

# ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ

"ಎಲ್ಲರೂ ಒಬ್ಬರಿಗಾಗಿ ಒಬ್ಬರು ಎಲ್ಲರಿಗಾಗಿ" ಸಹಕಾರಿ ತತ್ವದ ಮೇಲೆ ಶ್ರೀ ಭ್ರಮರಾಂಬ ಪತ್ತಿನ ಸಹಕಾರ ಸಂಘ ಮಸ್ಕಿ ಪಟ್ಟಣದಲ್ಲಿ 'ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ–1951' ರ ಅಡಿ ನೊಂದಾವಣೆಗೊಂಡು ದಿನಾಂಕ: 05.05.2000 ರಂದು ಕೇವಲ ರೂ. 7 ಲಕ್ಷ ಷೇರು ಬಂಡವಾಳದೊಂದಿಗೆ ಹಾಗೂ 400 ಜನ ಸದಸ್ಯರೊಂದಿಗೆ ತನ್ನ ಕಾರ್ಯ ಪ್ರಾರಂಭಿಸಿ, ನಂತರ ನೂತನವಾಗಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ರಾಜ್ಯ ಸೌಹಾರ್ದ ಕಾಯ್ದೆ–1997 ರ ಅಡಿಯಲ್ಲಿ ದಿನಾಂಕ: 12.12.2001 ರಂದು ಪರಿವರ್ತನೆಗೊಂಡಿತು.

ಸಹಕಾರಿಯು ಪ್ರಾರಂಭದಲ್ಲಿ ಮಸ್ಕಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಹಕಾರಿಯ ಮಾಹಿತಿ ನೀಡಿ ಸಣ್ಣ ಪುಟ್ಟ ವ್ಯಾಪಾರಸ್ಥರನ್ನು ಸದಸ್ಯರನ್ನಾಗಿ ಮಾಡಿಕೊಂಡು ಅವಶ್ಯಕತೆಗಳಿಗನುಗುಣವಾಗಿ ಆರ್ಥಿಕ ನೆರವು ನೀಡುತ್ತಾ ಹಾಗೂ ಅವರಿಂದ ಉಳಿತಾಯದ ಮನೋಭಾವನೆ ಬೆಳೆಸಿ ಠೇವಣಿಗಳನ್ನು ಸಂಗ್ರಹಿಸುತ್ತಾ ಜನರ ವಿಶ್ವಾಸಕ್ಕೆ ಪಾತ್ರವಾಯಿತು.

ಕ್ರಮೇಣ ಸಹಕಾರಿಯು ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು 2005 ನೇ ಇಸ್ವಿಯಲ್ಲಿ ಲಿಂಗಸೂಗೂರಿನಲ್ಲಿ ಪ್ರಥಮ ಶಾಖೆಯನ್ನು ತೆರೆದು ರಾಯಚೂರು–ಕೊಪ್ಪಳ ಜಿಲ್ಲೆಯಲ್ಲಿಯೇ ಪ್ರಪ್ರಥಮ ಶಾಖೆ ತೆರೆದ ಹೆಗ್ಗಳಿಕೆ ಸಹಕಾರಿಯು ಹೊಂದಿತು. ನಂತರ 2008 ರಲ್ಲಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸಹಕಾರಿಯ ವ್ಯವಹಾರ ವಿಸ್ತರಿಸಲು 2010 ರಲ್ಲಿ ಮಾನ್ವಿ ತಾಲೂಕಿನ ಕವಿತಾಳ ಗ್ರಾಮದಲ್ಲಿ ಶಾಖೆಯನ್ನು ಪ್ರಾರಂಭಿಸಿತು. ಎಲ್ಲಾ ಶಾಖೆಗಳು ಉತ್ತಮ ಆರ್ಥಿಕ ಪ್ರಗತಿಯತ್ತ ಸಾಗುತ್ತಿವೆ.

ಸಹಕಾರಿಯಲ್ಲಿ 9 ಜನ ನಿರ್ದೇಶಕರು ಮಂಡಳಿ ಇದ್ದು ವಿಶೇಷವಾಗಿ 12 ಜನ ಊರಿನ ಹಿರಿಯ ಗಣ್ಯರು, ವ್ಯಾಪಾರಸ್ಥರು ಹಾಗೂ ತಜ್ಞರನ್ನು ಒಳಗೊಂಡ ಸಲಹಾ ಸಮಿತಿಯನ್ನು ರಚಿಸಿಕೊಂಡಿದೆ. ಹಾಗೂ ಪ್ರತಿ ಶಾಖೆಯಲ್ಲಿಯೂ ಕೂಡ ಶಾಖೆ ಅಭಿವೃದ್ಧಿಗೊಳಿಸಲು 5–10 ಜನ ಶಾಖೆ ಸಲಹಾ ಸಮಿತಿ ನೇಮಕಗೊಂಡಿದೆ. ಮತ್ತು ಎಲ್ಲಾ ಶಾಖೆಗಳನ್ನು ನಿರ್ವಹಿಸಲು ಪ್ರತ್ಯೇಕವಾಗಿ ಮುಖ್ಯಕಛೇರಿಯನ್ನು ರಚಿಸಿಕೊಂಡಿದೆ. ಸಹಕಾರಿಯಲ್ಲಿ ಸಿಬ್ಬಂದಿಗಳು ಹಾಗೂ ಪಿಗ್ಮಿ ಏಜೆಂಟರು ಕೂಡಿ ಒಟ್ಟು 30 ಜನ ಕಾರ್ಯನಿರ್ವಹಿಸುತ್ತಿದ್ದಾರೆ. ಸಿಬ್ಬಂದಿಗಳಿಗೆ ಆಗಾಗ ಪರಿಣಿತರೊಂದಿಗೆ ತರಬೇತಿ ಕೊಡಿಸಿ ಉತ್ತಮವಾಗಿ ಕಾರ್ಯನಿರ್ವಹಿಸಲು ಅನುಕೂಲಮಾಡಿಕೊಟ್ಟಿದೆ.

31.03.2010 ಕ್ಕೆ ಸಹಕಾರಿಯು 3300 ಜನ ಸದಸ್ಯರಿಂದ ರೂ. 88.51 ಲಕ್ಷ ಷೇರು ಬಂಡವಾಳ ಹಾಗೂ ಸದಸ್ಯರಿಂದ ರೂ. 14.83 ಕೋಟಿ ಠೇವಣಿ ಸಂಗ್ರಹಿಸಿದೆ. ಸಹಕಾರಿಯು ಸದಸ್ಯರಿಗೆ ರೂ. 12 ಕೋಟಿಯಷ್ಟು ವಿವಿಧ ರೀತಿಯ ಸಾಲ ವಿತರಿಸಿದೆ. ಸಹಕಾರಿಯ ಒಟ್ಟು ದುಡಿಯುವ ಬಂಡವಾಳ ರೂ. 17.25 ಕೋಟಿ ಇರುತ್ತದೆ. ಕಳೆದ ಆರ್ಥಿಕ ವರ್ಷದಲ್ಲಿ ಸಹಕಾರಿಯು ರೂ. 162 ಕೋಟಿಯಷ್ಟು ಆರ್ಥಿಕ ವಹಿವಾಟು ನಡೆಸಿ, ರೂ. 40.35 ಲಕ್ಷ ಲಾಭ ಗಳಿಸಿದೆ. ಸಹಕಾರಿಯು ಪ್ರತಿ ವರ್ಷ ಸದಸ್ಯರಿಗೆ ಶೇ. 15 ರಷ್ಟು ಲಾಭಾಂಶ ವಿತರಿಸುತ್ತಾ ಬಂದಿದೆ.



**ಡಾ. ಶಿವ ಶರಣಪ್ಪ ಇತ್ಲಿ,**

ಅಧ್ಯಕ್ಷರು



**ಶ್ರೀ ವೀರೇಶ ಹಿರೇಮಠ,**

ಮುಖ್ಯಕಾರ್ಯನಿರ್ವಣಾಧಿಕಾರಿ

ದಶಮಾನೋತ್ಸವ ಆಚರಿಸುತ್ತಿರುವ ಈ ಸಂದರ್ಭದಲ್ಲಿ ರಾಯಚೂರು–ಕೊಪ್ಪಳ ಜಿಲ್ಲೆಯಲ್ಲಿರುವ ಎಲ್ಲಾ ಸಹಕಾರಿ ಸಂಸ್ಥೆಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಿದೆ. ಹಾಗೂ ಸದಸ್ಯರಿಗೆ 3 ದಿನ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಸಹಕಾರಿಯು ತನ್ನ ವ್ಯವಹಾರದ ಜೊತೆಗೆ ಉಚಿತ ನೇತ್ರ ಚಿಕಿತ್ಸೆ ಶಿಬಿರ, ಉಚಿತ ಯೋಗ ಶಿಬಿರ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ, ಸದಸ್ಯರಿಗೆ ಯುಗಾದಿ ಸಂಭ್ರಮ ಕಾರ್ಯಕ್ರಮ ಏರ್ಪಡಿಸಿ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಕೂಡ ತೊಡಗಿಸಿಕೊಂಡಿದೆ.





## ಇಫ್ಕೊ ಟೋಕಿಯೊ ಸೆಲ್ಕೊ ಕಂಪನಿಗಳ

## ಜೊತೆಗೆ ರಾಜ್ಯ ಕ್ರೆಡಿಟ್ ಅಸೋಸಿಯೇಶನ್ ಒಪ್ಪಂದ

**ಬಡ್ಡಿಯೇತರ ಆದಾಯ ಹೆಚ್ಚುವರಿಗೆ ಕ್ರೆಡಿಟ್ ಅಸೋಸಿಯೇಶನ್ ಯೋಜನೆ**

ರಾಜ್ಯದ ಕ್ರೆಡಿಟ್ ಸಹಕಾರಿಗಳಿಗೆ ಬಡ್ಡಿಯೇತರ ಆದಾಯ ಹೆಚ್ಚಿಸುವ ದೃಷ್ಟಿಯಿಂದ ಹಾಗೂ ಕ್ರೆಡಿಟ್ ಸಹಕಾರಿಗಳಿಗೆ ಹೆಚ್ಚಿನ ಚಟುವಟಿಕೆಯನ್ನು ಒದಗಿಸುವ ದೃಷ್ಟಿಯಿಂದ ರಾಜ್ಯ ಕ್ರೆಡಿಟ್ ಸಹಕಾರ ಸಂಘಗಳ ಅಸೋಸಿಯೇಶನ ವತಿಯಿಂದ ಇಫ್ಕೋ ಟೊಕಿಯೊ, ಸೆಲ್ಕೊ ಕಂನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡಿದೆ. ರಾಜ್ಯ ಕ್ರೆಡಿಟ್ ಸಹಕಾರ ಸಂಘಗಳ ಅಸೋಸಿಯೇಶನ ವತಿಯಿಂದ ಪ್ರಧಾನ ಕಾರ್ಯದರ್ಶಿ ಶ್ರೀ ಗುರುನಾಥ ಜ್ಯಾಂತಿಕರ ಎರಡೂ ಒಪ್ಪಂದಗಳಿಗೆ ಸಹಿ ಮಾಡಿದರು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

Swabhimani Sahakari, Monthly, Posted
at Wilson Garden Post Office 560027, Posting Day 8th
Reg. No. RNP/BGS/2094/2008-10 Licence to post
RNI Ref: KARBILO1214/10/1/2002-TC

## ಶ್ರೇಷ್ಠ ಸಹಕಾರಿ

### ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ-19

# 'ಶ್ರೇಷ್ಠ ಸಹಕಾರಿ' ಹಾಗೂ 'ಸಾಧನಾ ಪುರುಷ' ಪ್ರಶಸ್ತಿ ಪುರಸ್ಕೃತ

## ಶ್ರೀ ಎನ್. ಶ್ರೀನಿವಾಸಮೂರ್ತಿ



ಸುಭದ್ರತೆ, ಅಭಿವೃದ್ಧಿ ಹಾಗೂ ಸೇವೆಯನ್ನೆ ಬ್ಯಾಂಕಿನ ಗುರಿಯನ್ನಾಗಿಸಿಕೊಂಡು ಅತ್ಯಂತ ಕ್ರೀಯಾಶೀಲತೆಯಿಂದ ಶುಶೃತಿ ಸಹಕಾರ ಸೌಹಾರ್ದ ಬ್ಯಾಂಕನ್ನು ಮುನ್ನಡೆಸುತ್ತಿರುವ ಶ್ರೀ ಎನ್.ಶ್ರೀನಿವಾಸಮೂರ್ತಿಯವರು ಸಂಯುಕ್ತ ಸಹಕಾರಿಯ ನಿರ್ದೇಶಕರು. ಶುಶೃತಿ ಸಹಕಾರ ಸೌಹಾರ್ದ ಬ್ಯಾಂಕನ ಸ್ಥಾಪಕ ಅಧ್ಯಕ್ಷರಾಗಿರುವ ಶ್ರೀಯುತರ ಸೇವೆ ಹಾಗೂ ಸಾಧನೆಗಳನ್ನು ಗಮನಿಸಿದ ಅಂತರರಾಷ್ಟ್ರೀಯ ಪಬ್ಲಿಶಿಂಗ್ ಹೌಸ ನ್ಯೂ ದಿಲ್ಲಿ ಇವರು 1999 ರಲ್ಲಿ ಶ್ರೀಯುತರಿಗೆ 'ಸಾಧನಾ ಪುರುಷ' 'Man of Achievement' ಪ್ರಶಸ್ತಿ ನೀಡಿ ಗೌರವಿಸಿದೆ. 2009 ರಲ್ಲಿ ದಾಸರಹಳ್ಳಿ ವಿಧಾನ ಸಭೆ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀಯುತರಿಗೆ 'ಶ್ರೇಷ್ಠ ಸಹಕಾರಿ' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಈ ಸಾಧನೆಗಳು ಪ್ರಶಸ್ತಿಗಳು ಇವ್ಯಾವುದಕ್ಕೂ ಹೆಚ್ಚು ಮಹತ್ವ ನೀಡದೆ ಪ್ರಚಾರವನ್ನು ಬಯಸದೆ ತಮ್ಮಷ್ಟಕ್ಕೆ ತಾವೇ ಸಹಕಾರಿ ಕ್ಷೇತ್ರದಲ್ಲಿ ಕ್ರೀಯಾಶೀಲರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಯುತರು ಮೂಲತಃ ಬೆಂಗಳೂರು ಜಿಲ್ಲೆಯ ಆನೇಕಲ್ ತಾಲುಕಿನ ಜಿಗಣಿ ಹೊಬಳಿ ಹೆನ್ನಾಗರದಲ್ಲಿ ರೈತ ಕುಟುಂಬದ ದಿ. ಶ್ರೀ ಎನ್.ನಾರಾಯಣಪ್ಪನವರ ಪುತ್ರರು. ದಿನಾಂಕ 18-6-1952 ರಲ್ಲಿ ಜನನ. ಹೆನ್ನಾಗರದಲ್ಲಿ ಪ್ರಾಥಮಿಕ ಶಿಕ್ಷಣ. ಶ್ರೀಯುತರು 1973ರಲ್ಲಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ.ಮೆಕ್ಯಾನಿಕಲ್ ಪೂರೈಸಿಕೊಂಡು 1975ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಪಿ.ಎಸ್.ಜಿ. ಇನ್‌ಸ್ಟಿಟಿಟ್ಯೂಟ್ ಪದವಿ ಎಂ.ಇ. ಪದವಿಯಲ್ಲಿ ದ್ವಿತಿಯ ರ್‍ಯಾಂಕ್ ಪಡೆದರು. ಜೊತೆಗೆ ರೇಡಿಯೊ ಮತ್ತು ಎಲೆಕ್ಟ್ರಾನಿಕ್ ಇಂಜಿನಿಯರ ಡಿಪ್ಲೊಮಾಗಳನ್ನು ಪಡೆದು B.E.L GTRE 1975 ರಿಂದ 1997 ರವರೆಗೆ ಸೇವೆ ಸಲ್ಲಿಸಿದ್ದಾರೆ. ಇದೇ ಅವಧಿಯ ಅಂದರೆ 1986 ರಿಂದ 1988 ರ ವರೆಗೆ ಕಿಯೊನಿಕ್ಸ್ ಸಂಸ್ಥೆಯಲ್ಲಿಯೂ ಸೇವೆ ಸಲ್ಲಿಸಿ ಸಮಾಜ ಹಾಗೂ ಯುವ ಜನಾಂಗಕ್ಕೆ ಮಾರ್ಗದರ್ಶನ ಮಾಡುವ ದೃಷ್ಟಿಯಿಂದ 1997 ರಲ್ಲಿ ಸ್ವಯಂ ನಿವೃತ್ತಿಪಡೆದರು.

ಸ್ವಯಂ ನಿವೃತ್ತಿ ಪಡೆದನಂತರ 'ಶುಶೃತಿ ಇಂಡಸ್ಟ್ರಿಯಲ್ ಟ್ರೈನಿಂಗ ಇನಸ್ಟಿಟಿಟ್ಯೂಟ್' ಪ್ರಾಂಶುಪಾಲರಾಗಿ ಯುವಕರಿಗೆ ತಾಂತ್ರಿಕ ಮಾರ್ಗದರ್ಶನ ಮಾಡುವ ಕಾರ್ಯ ಪ್ರಾರಂಭಿಸಿದರು 'ಶುಶೃತಿ ವಿದ್ಯಾ ಸಂಸ್ಥೆ'ಯ ಸ್ಥಾಪಕರಾಗಿ ಆರ್ಥಿವಾಗಿ ಹಿಂದುಳಿದವರಿಗೆ ಸಹಾಯ ಹಸ್ತ ನೀಡುವ ಪ್ರವೃತ್ತಿಯಿರುವ ಶ್ರೀಯುತರು ಪ್ರಾಥಮಿಕ, ಪ್ರೌಢ ಶಿಕ್ಷಣ, ಬಿ.ಎಡ್ ಕಾಲೇಜು ಡಿ.ಎಡ್ ಕಾಲೇಜು ನರ್ಸಿಂಗ್ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರ ಇನ್‌ಸ್ಟಿಟಿಟ್ಯೂಟ್ ಆಫ್ ಮೆನೆಜಮೆಂಟ್ ಸ್ಟಡೀಜ ಮತ್ತು ಬಿಸಿನೆಸ್ ಮೆನೆಜಮೆಂಟ್ ಪದವಿ ಇತ್ಯಾದಿ ಸಮೂಹ ಸಂಸ್ಥೆಗಳನ್ನು ಸ್ಥಾಪಿಸಿ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸ ನೀಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಊಟ ವಸತಿ ಸೌಕರ್ಯವನ್ನು ಒದಗಿಸುತ್ತಿದ್ದಾರೆ.

ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಇಷ್ಟೊಂದು ಕಾರ್ಯ ನಿರ್ವಹಿಸುತ್ತಿರುವ ಶ್ರೀಯುತರಿಗೆ ಸಹಕಾರ ಕ್ಷೇತ್ರವೂ ಕೈಬೀಸಿ ಕರೆದು ಸಾರ್ವಜನಿಕರಿಗೆ ಹೆಚ್ಚಿನ ಸೇವೆಯನ್ನು ಒದಗಿಸಲು ಅವಕಾಶ ಮಾಡಿಕೊಟ್ಟಿದೆ. ಶೀಘ್ರದಲ್ಲಿಯೇ ಆನೇಕಲ್ ಬಳಿ 25 ಎಕರೆ ಜಾಗದಲ್ಲಿ ಬಹತ್ ವೃದ್ಧಾಶ್ರಮ ಸ್ಥಾಪನೆ ಮಾಡುವ ಯೋಜನೆ ಹೊಂದಿದ್ದಾರೆ.

2001 ರಿಂದ ಇದುವರೆಗೆ 2 ಬಾರಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬೆಂಗಳೂರು ಜಿಲ್ಲೆಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದಾರೆ. ಸಹಕಾರ ಭಾರತಿಯ ದಕ್ಷಿಣ ವಲಯದ ಅಧ್ಯಕ್ಷರಾಗಿ ಪ್ರಾಂತೀಯ ಕಾರ್ಯಕಾರಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿ ಎಲೆಮರೆಯ ಕಾಯಿಯಂತೆ ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ/ಅಧಿಕಾರಿ/ಸಿಬ್ಬಂದಿಯವರಿಗೆ

## ಶ್ರೀ ಕೃಷ್ಣರಾಜೇಂದ್ರ ಗಿರಿಧಾಮ ಕೆಮ್ಮಣ್ಣಗುಂಡಿಯಲ್ಲಿ 10 ದಿನಗಳ ತರಬೇತಿ

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರಿಗಾಗಿ 3 ನೇ ತಂಡದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಪ್ರಸಿದ್ಧ ಪ್ರವಾಸಿ ತಾಣ ಚಿಕ್ಕಮಗಳೂರಿನ ಕೆಮ್ಮಣ್ಣಗುಂಡಿಯಲ್ಲಿ ದಿನಾಂಕ 17-6-2010 ರಿಂದ 26-6-2010 ರವರೆಗೆ ನಡೆಸಲಾಗುತ್ತದೆ. ಭಾಗವಹಿಸಲು ಅಪೇಕ್ಷಿಸುವವರು ತಮ್ಮ ಹೆಸರನ್ನು **31-5-2010** ರೊಳಗಾಗಿ ನೊಂದಾಯಿಸಲು ಸೂಚಿಸಿದೆ

ತರಬೇತಿಯ ಅವದಿ 10 ದಿನಗಳು (8 ದಿನಗಳು ತರಬೇತಿ 2 ದಿನಗಳು ಅಧ್ಯಯನ ಪ್ರವಾಸ). ತರಬೇತಿಯಲ್ಲಿ ಊಟ, ಉಪಹಾರ, ವಸತಿ, ಅಧ್ಯಯನ ಸಾಹಿತ್ಯ ಹಾಗೂ ಅಧ್ಯಯನ ಪ್ರವಾಸ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇದೆ. ತರಬೇತಿ ಶುಲ್ಕ ಒಬ್ಬರಿಗೆ ರೂ 5000/. ಕಾರ್ಯಕ್ರಮದಲ್ಲಿ ಕೇವಲ 40 ಜನರಿಗೆ ಭಾಗವಹಿಸಲು ಅವಕಾಶವಿದೆ. ಮೊದಲು ಅರ್ಜಿಯನ್ನು ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ಭಾಗವಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗು ಪ್ರಯಾಣ ವೆಚ್ಚವನ್ನು ಸಹಕಾರಿಗಳು ತಮ್ಮ ಸಹಕಾರಿಯಿಂದ ಭರಿಸಬೇಕು. ಭಾಗವಹಿಸಲು ಇಚ್ಛಿಸುವವರು ನಿಗದಿತ ಅರ್ಜಿ ನಮೂನೆಯಲ್ಲಿ, ಹೆಸರು, ವಿಳಾಸ, ನಿರ್ವಹಿಸುತ್ತಿರುವ ಹುದ್ದೆ, ಪಾಸಪೋರ್ಟ ಅಳತೆಯ ಒಂದು ಭಾವಚಿತ್ರದೊಂದಿಗೆ ವಿವರಗಳನ್ನು ಭರ್ತಿಮಾಡಿ ದಿನಾಂಕ 31-5-2010 ರೊಳಗಾಗಿ ಕಳುಹಿಸಿ ನಿಮ್ಮ ಸ್ಥಾನ ಕಾಯ್ದಿರಿಸಿಕೊಳ್ಳಲು ಸೂಚಿಸಿದೆ. ತರಬೇತಿಗೆ ಹಾಜರಾಗುವವರಿಗೆ ಪ್ರವೇಶ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ದೂರವಾಣಿ ಸಂಖ್ಯೆ:**

ಶ್ರೀ ನಾರಾಯಣ ಹೆಗಡೆ ವ್ಯವಸ್ಥಾಪಕ ನಿರ್ದೇಶಕರು (ಪ್ರ): 9480579882, ಶ್ರೀ ವಿ.ಜೆ.ಕಾರಕೂನ ತರಬೇತಿ ಅಧಿಕಾರಿ: 9482734077,
ಶ್ರೀ ವೈ.ಕುಮಾರ ಉಪಪ್ರಧಾನ ವ್ಯವಸ್ಥಾಪಕರು: 9845893455, ಸಂಯುಕ್ತ ಸಹಕಾರಿಯ ದೂರವಾಣಿ: 080 22127003/4

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಮೊದಲ ಮಹಡಿ, ನಂ. 132, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು- 560 002 ಇವರಿಂದ ಪ್ರಕಟಿತ
ಸಂಪಾದಕ, ಪ್ರಕಾಶಕ: ನಾರಾಯಣ ಹೆಗಡೆ, ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು ಸಂಚಿಕೆ ಸಿದ್ಧತೆ ವಿ.ಜೆ.ಕಾರಕೂನ